ಅಧ್ಯಾತ್ಮಗ್ರಂಥಾವಳಿ

# ಆತ್ಮಬೋಧ

( ಮೂಲ, ಅನುವಾದ, ಟಿಪ್ಪಣಿ, ಪರಿಶಿಷ್ಟ-ಇವುಗಳ ಸಹಿತ )

ಅನುವಾದಕರು ಮತ್ತು ಸಂಸ್ಕರಿಸಿದವರು :

**ಡಾನಂದೇಂದ್ರಸರಸ್ವತೀಸ್ವಾಮಿಗಳವರು**

ಕ್ರಮಾಂಕ ೬೨

ಪ್ರಕಾಶಕರು :

**ಅಧ್ಯಾತ್ಮಪ್ರಕಾಶಕಾರ್ಯಾಲಯ,**

**ಹೊಳೆನರಸೀಪುರ**

**1994**

# ಪೀಠಿಕೆ

"ಆತ್ಮಬೋಧ"ವೆಂಬ ಈ ಚಿಕ್ಕ ಪ್ರಕರಣದಲ್ಲಿ ವೇದಾಂತಬೋಧಿತನಾಗಿರುವ ಆತ್ಮನು ನಿತ್ಯಶುದ್ಧಬುದ್ಧಮುಕ್ತಸ್ವಭಾವನೂ ಸಮಸ್ತಜಗತ್ಕಾರಣವಾದ ಬ್ರಹ್ಮಸ್ವರೂಪನೂ ಆಗಿರುವನೆಂಬುದನ್ನು ಬಗೆಬಗೆಯ ಉಪಮಾನಗಳಿಂದ ಸರಳವಾದ ಭಾಷೆಯಲ್ಲಿ ತಿಳಿಸಿರುತ್ತದೆ. ಆದ್ದರಿಂದ ವೇದಾಂತವಿಚಾರವನ್ನು ಮಾಡುವವರಿಗೆ ಇದು ಒಂದು ಅಮೂಲ್ಯವಾದ ಪ್ರಕರಣವಾಗಿರುತ್ತದೆ.

ಪ್ರಕರಣವು ಶ್ರೀಶಂಕರಾಚಾರ್ಯರವರ ಕೃತಿಯೆಂದು ಪ್ರಸಿದ್ಧಿ ; ಆದರೆ ಇದರಲ್ಲಿ 'ಅನಿರ್ವಾಚ್ಯವಾದ ಅನಾದ್ಯವಿದ್ಯೆಯು ಕಾರಣೋಪಾಧಿಯು' (ಶ್ಲೋ, ೧೪), ಎಂದು ಬರೆದಿರುವದನ್ನೂ, 'ಬ್ರಹ್ಮವೇ ನಾನು' ಎಂಬ ಅದ್ವೈತವಾಸನೆಯನ್ನು ನಿರಂತರವಾಗಿ ಅಭ್ಯಾಸಮಾಡಿದರೆ ಅವಿದ್ಯಾವಿಕ್ಷೇಪಗಳು ತೊಲಗುವವು, (೩೭) "ಧ್ಯಾನಿಸುವವನು ಭ್ರಮರಕೀಟದಂತೆ ಸತ್ಯಜ್ಞಾನಾದಿಧರ್ಮಗಳನ್ನು ಪಡೆದುಕೊಳ್ಳುತ್ತಾನೆ" (೪೬)– ಎಂದು ಬರೆದಿರುವದನ್ನೂ ನೋಡಿದರೆ ಇದನ್ನು ಬ್ರಹ್ಮಸೂತ್ರಭಾಷ್ಯಕಾರರಾದ ಸುಪ್ರಸಿದ್ಧ ಶಂಕರಭಗವತ್ಪಾದರವರೇ ಮಾಡಿದರೆಂದು ಹೇಳಲು ಅಡಚಣೆಗಳಿವೆಯೆನ್ನಬೇಕು. ಕೆಲವು ಶ್ಲೋಕಗಳ ಅನ್ವಯವು ಸರಳವಾಗಿಲ್ಲದಿರುವದೂ ಈ ಅಭಿಪ್ರಾಯಕ್ಕೆ ಪುಷ್ಟಿಯನ್ನು ಕೊಡುತ್ತದೆ.

ಬ್ರಹ್ಮೀಭೂತ ಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳು 1938ನೇ ವರ್ಷದಲ್ಲಿಯೇ ಬರೆದು ಪ್ರಕಟಿಸಿದ್ದ ಈ ಗ್ರಂಥವನ್ನು ಈಗ ನಾಲ್ಕನೆಯ ಬಾರಿಗೆ ಪುನರ್ಮುದ್ರಿಸಿ ವಾಚಕರಿಗೆ ಸಮರ್ಪಿಸಲಾಗಿದೆ. ವಾಚಕಮಹಾಶಯರು ನಮ್ಮ ಉಳಿದ ಗ್ರಂಥಗಳಂತೆಯೇ ಈ ಗ್ರಂಥವನ್ನೂ ಆದರದಿಂದ ಬರಮಾಡಿಕೊಂಡು ಪ್ರೋತ್ಸಾಹಿಸುವರೆಂದು ನಂಬಿದೆ.

ಇತಿ–

ಸಜ್ಜನವಿಧೇಯ,

ಹೊಳೆನರಸೀಪುರ
ತಾ|| 15–2–1994,

ಹೆಚ್. ಎಸ್. ಲಕ್ಷ್ಮೀನರಸಿಂಹಮೂರ್ತಿ,
ಅಧ್ಯಾತ್ಮಗ್ರಂಥಾವಳಿಯ ಸಂಪಾದಕ.

# ವಿಷಯಗಳ ಅನುಕ್ರಮಣಿಕೆ


| ವಿಷಯ | | ಪುಟ |
|---|---|---|
| ಪೀಠಿಕೆ | | 3 |
| ಆತ್ಮಬೋಧ–ಸಂಸ್ಕೃತಮೂಲ, ಅನುವಾದ, ಟಿಪ್ಪಣಿಗಳೊಡನೆ | | ೧–೨೨ |
| ೧. ಅವತರಣಿಕೆ | ೧ | |
| ೨. ಮೋಕ್ಷಕ್ಕೆ ಸಾಧನ | ೧ | |
| ೩. ಜಗದ್ಭ್ರಮೆ | ೩ | |
| ೪. ಆತ್ಮನ ಸೋಪಾಧಿಕರೂಪ | ೪ | |
| ೫. ಆತ್ಮಾನಾತ್ಮವಿವೇಕ | ೬ | |
| ೬. ಆತ್ಮನ ನಿಜವಾದ ಸ್ವರೂಪ | ೮ | |
| ೭. ಜೀವಪರಮಾತ್ಮೈಕ್ಯ | ೧೦ | |
| ೮. ಸಾಧನೆಯ ಆವಶ್ಯಕತೆ | ೧೨ | |
| ೯. ಜ್ಞಾನದಿಂದಾಗುವ ಫಲ | ೧೩ | |
| ೧೦. ಜೀವನ್ಮುಕ್ತಿ | ೧೫ | |
| ೧೧. ವಿದೇಹಮುಕ್ತಿ | ೧೭ | |
| ೧೨. ಬ್ರಹ್ಮಸ್ವರೂಪ | ೧೭ | |
| ೧೩. ಬ್ರಹ್ಮಪ್ರಾಪ್ತಿಯು ಯಾರಿಗಾಗುವದು ? | ೨೧ | |
| ಪರಿಶಿಷ್ಟ : | | ೨೩–೨೫ |
| (೧) ಉಪಮಾನಗಳ ಅಕ್ಷರಾನುಕ್ರಮಣಿಕೆ | ೨೩ | |
| (೨) ಪ್ರಮಾಣವಾಕ್ಯಗಳು | ೨೫ | |
| ಶ್ಲೋಕಾನುಕ್ರಮಣಿಕೆ | | ೨೭ |

|| ಓಂ ||

# ಆತ್ಮಬೋಧ

## ೧. ಅವತರಣಿಕೆ

**ತಪೋಭಿಃ ಕ್ಷೀಣಪಾಪಾನಾಂ ಶಾನ್ತಾನಾಂ ವೀತರಾಗಿಣಾಮ್ |**
**ಮುಮುಕ್ಷೂಣಾಮಪೇಕ್ಷ್ಯೋಽಯಮಾತ್ಮಬೋಧೋ ವಿಧೀಯತೇ ||**

೧. ತಪಸ್ಸುಗಳಿಂದ[1] ಪಾಪವನ್ನು ಕಳೆದುಕೊಂಡು ಶಾಂತರಾಗಿ ವೈರಾಗ್ಯವನ್ನು ಹೊಂದಿರುವ ಮುಮುಕ್ಷುಗಳಿಗೆ ಬೇಕಾಗುವ ಈ ಆತ್ಮ ಬೋಧವನ್ನು ತಿಳಿಸುತ್ತೇವೆ.

## ೨. ಮೋಕ್ಷಕ್ಕೆ ಸಾಧನ

**ಬೋಧೋಽನ್ಯಸಾಧನೇಭ್ಯೋ ಹಿ ಸಾಕ್ಷಾನ್ಮೋಕ್ಷೈಕಸಾಧನಮ್ |**
**ಪಾಕಸ್ಯ ವಹ್ನಿವಜ್ಜ್ಞಾನಂ ವಿನಾ ಮೋಕ್ಷೋ ನ ಸಿಧ್ಯತಿ ||೨||**

೨. ಅಡಿಗೆಗೆ ಬೆಂಕಿಯೇ ನೇರಾದ ಸಾಧನವಾಗಿರುವಂತೆ ಜ್ಞಾನವೇ ಮಿಕ್ಕ ಸಾಧನಗಳಿಗಿಂತಲೂ ಮೋಕ್ಷಕ್ಕೆ ತೀರ ಹತ್ತಿರವಾದ[2] ಮುಖ್ಯಸಾಧನವಾಗಿರುತ್ತದೆ. (ಮಿಕ್ಕದ್ದೆಲ್ಲವೂ ಇದ್ದರೂ ಬೆಂಕಿಯಿಲ್ಲದೆ ಇದ್ದರೆ ಅಡಿಗೆಯು ಹೇಗೆ ಆಗಲಾರದೋ ಅದರಂತೆ) ಜ್ಞಾನವಿಲ್ಲದವರಿಗೆ ಮೋಕ್ಷವು ಸಿದ್ಧಿಸುವದೇ ಇಲ್ಲ.

1. ಭಗವದ್ಗೀತೆಯೇ ಮುಂತಾದವುಗಳಲ್ಲಿ ಹೇಳಿರುವ ಶಾರೀರಕ, ವಾಚಿಕ, ಮಾನಸಿಕ- ತಪಸ್ಸುಗಳಿಂದ ಚಿತ್ತಶುದ್ಧಿಯಾಗಿ ವಿವೇಕವುಂಟಾಗಿ ಶಾಂತಿ. ವಿರಕ್ತಿ, ಮುಮುಕ್ಷುತೆ- ಇವುಗಳು ಬಂದು ಅಧಿಕಾರವನ್ನು ಹೊಂದಿದವರಿಗೇ ವಿಚಾರದಿಂದ ಜ್ಞಾನವುಂಟಾಗುವದು.

2, ಕರ್ಮಾದಿಗಳು ಪರಂಪರೆಯ ಸಾಧನ, ಜ್ಞಾನವು ಸಾಕ್ಷಾತ್ಸಾಧನ.

**ಅವಿರೋಧಿತಯಾ ಕರ್ಮ ನಾವಿದ್ಯಾಂ ವಿನಿವರ್ತಯೇತ್ ।**
**ವಿದ್ಯಾಽವಿದ್ಯಾಂ ನಿಹನ್ತ್ಯೇವ ತೇಜಸ್ತಿಮಿರಸಙ್ಘವತ್ ॥೩॥**

೩. ಕರ್ಮಕ್ಕೂ ಅಜ್ಞಾನಕ್ಕೂ ವಿರೋಧವಿಲ್ಲವಾದ್ದರಿಂದ[1] ಕರ್ಮವು ಅಜ್ಞಾನವನ್ನು ಹೋಗಲಾಡಿಸಲಾರದು. ಜ್ಞಾನವು ಮಾತ್ರ, ಬೆಳಕು ಕತ್ತಲೆಯ ರಾಶಿಯನ್ನು ನಾಶಪಡಿಸುವಂತೆ, ಅಜ್ಞಾನವನ್ನು ತೊಲಗಿಸಿಯೇ ತೀರುತ್ತದೆ.

**ಅವಚ್ಛಿನ್ನ[2] ಇವಾಜ್ಞಾನಾತ್ತನ್ನಾಶೇ ಸತಿ ಕೇವಲಃ ।**
**ಸ್ವಯಂ ಪ್ರಕಾಶತೇ ಹ್ಯಾತ್ಮಾ ಮೇಘಾಪಾಯೇಂಶುಮಾನಿವ ॥೪॥**

೪. ಅಜ್ಞಾನದಿಂದ ಆತ್ಮನು ಆಳತೆಗೆ ಸಿಕ್ಕಿರುವವನಂತೆ ತೋರುತ್ತಿದ್ದು ಆ ಅಜ್ಞಾನವು ನಾಶವಾಗುತ್ತಲೂ ತಾನೊಬ್ಬನೇ ಆಗಿ, ಮೋಡವು ತೊಲಗಿದ ಬಳಿಕ ಸೂರ್ಯನು ಬೆಳಗುವಂತೆ ತಾನೇ ಬೆಳಗುತ್ತಾನೆ.

**ಅಜ್ಞಾನಕಲುಷಂ ಜೀವಂ ಜ್ಞಾನಾಭ್ಯಾಸಾದ್ವಿನಿರ್ಮಲಮ್ ।**
**ಕೃತ್ವಾ ಜ್ಞಾನಂ ಸ್ವಯಂ ನಶ್ಯೇಜ್ಜಲಂ ಕತಕರೇಣುವತ್ ॥೫॥**

೫. ಜ್ಞಾನವು ಅಜ್ಞಾನದ ಕಲ್ಮಷವುಳ್ಳ ಜೀವನನ್ನು ಜ್ಞಾನಾಭ್ಯಾಸದಿಂದ[3] ಪೂರ ನಿರ್ಮಲಗೊಳಿಸಿ, ನೀರನ್ನು ನಿರ್ಮಲಗೊಳಿಸಿದ ಚಿಲ್ಲದ ಬೀಜದ ಹುಡಿಯಂತೆ[4], ತಾನೂ ಕಾಣದೆಹೋಗುವದು.

1. ಕರ್ಮವು ಆತ್ಮನನ್ನರಿಯದ್ದೆಂಬ ಅಜ್ಞಾನದಿಂದುಂಟಾದ ಕಾಮದಿಂದಲೇ ಹುಟ್ಟುವದು; ಆದ್ದರಿಂದ ಕರ್ಮಕ್ಕೂ ಅಜ್ಞಾನಕ್ಕೂ ವಿರೋಧವಿಲ್ಲ.

2, "ಪರಿಚ್ಛಿನ್ನ" ಪಾ॥

3. ಮತ್ತೆಮತ್ತೆ ಮಾಡುವ ವಿಚಾರದಿಂದ,

4. ಚಿಲ್ಲದಬೀಜದ ಹುಡಿಯು ನೀರಿನಲ್ಲಿದ್ದ ನಿಜವಾದ ಕಲ್ಮಷವನ್ನು ತೊಳೆಯುವಂತೆ ಜ್ಞಾನವು ಜೀವನ ನಿಜವಾದ ಕಲ್ಮಷವನ್ನು ತೊಳೆಯುವದೆಂದೇನೂ ಅಭಿಪ್ರಾಯವಿಲ್ಲ ; ಹಿಂದಿನ ಶ್ಲೋಕವನ್ನು ನೋಡಿ,

## ೩. ಜಗದ್ಭ್ರಮೆ

**ಸಂಸಾರಃ ಸ್ವಪ್ನತುಲ್ಯೋ ಹಿ ರಾಗದ್ವೇಷಾದಿಸಙ್ಕುಲಃ ।**
**ಸ್ವಕಾಲೇ ಸತ್ಯವದ್ಭಾತಿ ಪ್ರಬೋಧೇ ಸತ್ಯಸದ್ಭವೇತ್ ॥ ೬ ॥**

೬. ರಾಗ, ದ್ವೇಷ– ಮುಂತಾದವುಗಳಿಂದ ತುಂಬಿರುವ ಸಂಸಾರವು ಸ್ವಪ್ನದಂತೆ ಇರುವದು. ಏಕೆಂದರೆ ಇದು ಆ ಕಾಲದಲ್ಲಿ ಸತ್ಯವಾಗಿರುವಂತೆ ತೋರುವದು, (ಎಚ್ಚರ) ಜ್ಞಾನವಾಗುತ್ತಲೂ ಸುಳ್ಳಾಗುವದು.

**ತಾವತ್ಸತ್ಯಂ ಜಗದ್ಭಾತಿ ಶುಕ್ತಿಕಾರಜತಂ ಯಥಾ ।**
**ಯಾವನ್ನ ಜ್ಞಾಯತೇ ಬ್ರಹ್ಮ ಸರ್ವಾಧಿಷ್ಠಾನಮದ್ವಯಮ್ ॥ ೭ ॥**

೭. ಎಲ್ಲಿಯವರೆಗೆ ಎಲ್ಲಕ್ಕೂ ಅಧಿಷ್ಠಾನವಾಗಿರುವ[1] ತನಗೆರಡನೆಯದಿಲ್ಲದ ಬ್ರಹ್ಮವು ತಿಳಿಯಬರುವದಿಲ್ಲವೋ ಅಲ್ಲಿಯವರೆಗೆ ಜಗತ್ತು ಕಪ್ಪೆಯ ಚಿಪ್ಪಿನಲ್ಲಿ ತೋರುವ ಬೆಳ್ಳಿಯಂತೆ ಸತ್ಯವಾಗಿ ತೋರುತ್ತಿರುವದು.

**ಉಪಾದಾನೇಽಖಿಲಾಧಾರೇ ಜಗನ್ತಿ ಪರಮೇಶ್ವರೇ ।**
**ಸರ್ಗಸ್ಥಿತಿಲಯಾನ್ ಯಾನ್ತಿ ಬುದ್ಬುದಾನೀವ ವಾರಿಣಿ ॥ ೮ ॥**

೮. ಎಲ್ಲಕ್ಕೂ ಆಧಾರವಾಗಿಯೂ ಉಪಾದಾನಕಾರಣವಾಗಿಯೂ[2] ಇರುವ ಪರಮೇಶ್ವರನಲ್ಲಿ ಜಗತ್ತುಗಳು, ನೀರಿನಲ್ಲಿ ಗುಳ್ಳೆಗಳ ಹಾಗೆ, ಸೃಷ್ಟಿಸ್ಥಿತಿಲಯಗಳನ್ನು ಹೊಂದುತ್ತಿರುವವು.

**ಸಚ್ಚಿದಾತ್ಮನ್ಯನುಸ್ಯೂತೇ ನಿತ್ಯೇ ವಿಷ್ಣೌ ಪ್ರಕಲ್ಪಿತಾಃ ।**
**ವ್ಯಕ್ತಯೋ ವಿವಿಧಾಃ ಸರ್ವಾ ಹಾಟಕೇ ಕಟಕಾದಿವತ್ ॥ ೯ ॥**

1. ಯಾವದನ್ನು ಯಾವದೆಂದು ಭ್ರಾಂತಿಪಡುವದೋ ಅದು ಅದಕ್ಕೆ ಅಧಿಷ್ಠಾನವು. ಕಪ್ಪೆಯಚಿಪ್ಪನ್ನು ಬೆಳ್ಳಿಯೆಂದು ಭ್ರಾಂತಿಪಡುವದುಂಟಷ್ಟೆ; ಅಲ್ಲಿ ಕಪ್ಪೆಯಚಿಪ್ಪು ಅಧಿಷ್ಠಾನವು, ಬೆಳ್ಳಿ ಆರೋಪಿತ, ಕಲ್ಪಿತ, ಅಥವಾ ಅಧ್ಯಸ್ತ. ಹೀಗೆಯೇ ಜಗತ್ತೆಂಬ ಅಧ್ಯಸ್ತಕ್ಕೆ ಬ್ರಹ್ಮವು ಅಧಿಷ್ಠಾನವು.

2. ಮಣ್ಣು ಮಡಕೆಗೆ ಉಪಾದಾನಕಾರಣವಾಗಿರುವಂತೆ ಬ್ರಹ್ಮವು ಜಗತ್ತಿಗೆ ಉಪಾದಾನಕಾರಣವಾಗಿದೆ. ಇಂಥ ಕಾರಣಕ್ಕಿಂತ ಕಾರ್ಯವು ಬೇರೆಯಾಗಿರುವದಿಲ್ಲ.

೯. ಎಲ್ಲದರಲ್ಲಿಯೂ ಪೋಣಿಸಿಕೊಂಡಿರುವ ಸಚ್ಚಿದ್ರೂಪನಾದ ನಿತ್ಯನಾದ ವಿಷ್ಣುವಿನಲ್ಲಿ ಬಗೆಬಗೆಯಾದ ಎಲ್ಲಾ ವ್ಯಕ್ತಿಗಳೂ ಚಿನ್ನದಲ್ಲಿ ಕಡಗವೇ ಮುಂತಾದವುಗಳಂತೆ[1] ಕಲ್ಪಿತವಾಗಿರುವವು.

**ಯಥಾಕಾಶೋ ಹೃಷೀಕೇಶೋ ನಾನೋಪಾಧಿಗತೋ ವಿಭುಃ ।**
**ತದ್ಭೇದಾದ್ಭಿನ್ನವದ್ಭಾತಿ ತನ್ನಾಶೇ ಕೇವಲೋ[2] ಭವೇತ್ ॥ ೧೦ ॥**

೧೦. ಹೇಗೆ ವ್ಯಾಪಕವಾದ ಆಕಾಶವು ಬೇರೆಬೇರೆಯ ಉಪಾಧಿಗಳಲ್ಲಿದ್ದು ಅವುಗಳ ಭೇದದಿಂದ ತಾನೂ ಬೇರೆಬೇರೆಯಾಗಿರುವಂತೆ ತೋರುವದೋ ಹಾಗೆ ವ್ಯಾಪಕನಾದ ಹೃಷೀಕೇಶನಾದ ಪರಮಾತ್ಮನು ಬಗೆಬಗೆಯ ಉಪಾಧಿಗಳೊಳಗೆ ಇದ್ದರೂ ಅವುಗಳು ಬೇರೆಬೇರೆಯಾಗಿರುವದರಿಂದ ತಾನೂ ಬೇರೆಬೇರೆಯಾಗಿರುವಂತೆ ತೋರುವನು; ಅವುಗಳು ನಾಶವಾಗಲು ತಾನೊಬ್ಬನೇ ಆಗುವನು.

## ೪. ಆತ್ಮನ ಸೋಪಾಧಿಕರೂಪ

**ನಾನೋಪಾಧಿವಶಾದೇವ ಜಾತಿನಾಮಾಶ್ರಮಾದಯಃ[3] ।**
**ಆತ್ಮನ್ಯಾರೋಪಿತಾಸ್ತೋಯೇ ರಸವರ್ಣಾದಿಭೇದವತ್ ॥ ೧೧ ॥**

೧೧. ನೀರಿನಲ್ಲಿ ಬೇರೆಬೇರೆ ರುಚಿ, ಬಣ್ಣ– ಮುಂತಾದವು ಕಲ್ಪಿತವಾಗಿರುವಂತೆ[4] ಆತ್ಮನಲ್ಲಿ ಜಾತಿ, ನಾಮ, ಆಶ್ರಮ– ಮುಂತಾದವುಗಳು,

1, ನಿಜವಾಗಿ ನೋಡಿದರೆ ಆತ್ಮನು ಚಿನ್ನದಂತೆ ಸಾಮಾನ್ಯವಾಗಿಯೂ ಜಗತ್ತಿನ ವ್ಯಕ್ತಿಗಳು ಒಡವೆಗಳಂತೆ ವಿಶೇಷವಾಗಿಯೂ ಇರುವದಿಲ್ಲ; ಅವು ಕೇವಲ ಕಲ್ಪಿತವಾಗಿರುತ್ತವೆ. ಮುಂದಿನ ಶ್ಲೋಕವನ್ನು ನೋಡಿ.

2. 'ಸತಿ ಕೇವಲಃ' ಪಾ॥

3. 'ಜಾತಿವರ್ಣಾಶ್ರಮಾದಯಃ' ಪಾ॥

4. ನೀರಿನಲ್ಲಿ ಯಾವ ಸವಿಯೂ ಇಲ್ಲದಿದ್ದರೂ ಅದು ಸಕ್ಕರೆಯಿಂದ ಸಿಹಿಯಾಗಿ ತೋರುವದು, ಕ್ವಿನೀನ್‌ಪುಡಿಯಿಂದ ಕಹಿಯಾಗಿ ತೋರುವದು; ಅದರಲ್ಲಿ ಯಾವ ಬಣ್ಣವೂ ಇಲ್ಲದಿದ್ದರೂ ಒಳಗೆ ಸೇರಿರುವ ಮಣ್ಣು, ಬೆಲ್ಲ–ಮುಂತಾದವುಗಳಿಂದ ಆಯಾ ಬಣ್ಣವುಳ್ಳದ್ದರಂತೆ ತೋರುವದು. ಹೀಗೆಯೇ ಆತ್ಮನಿಗೂ ಶರೀರಾದಿಗಳಿಂದ ಜಾತ್ಯಾದಿಗಳಿರುವಂತೆ ತೋರುತ್ತದೆ.

ಬೇರೆಬೇರೆಯ ಉಪಾಧಿಗಳ ವಶದಿಂದಲೇ ಕಲ್ಪಿತವಾಗಿರುತ್ತವೆ.

ಪಞ್ಚೀಕೃತಮಹಾಭೂತಸಂಭವಂ ಕರ್ಮಸಞ್ಚಿತಮ್ ।
ಶರೀರಂ ಸುಖದುಃಖಾನಾಂ ಭೋಗಾಯತನಮುಚ್ಯತೇ ॥ ೧೨ ॥

೧೨. ಪಂಚೀಕೃತವಾದ[1] ಮಹಾಭೂತಗಳಿಂದ ಆಗಿರುವದಾಗಿಯೂ ಕರ್ಮಗಳಿಂದ ಏರ್ಪಟ್ಟಿರುವದಾಗಿಯೂ ಸುಖದುಃಖಗಳನ್ನು ಅನುಭವಿಸುವ ಸ್ಥಾನವಾಗಿಯೂ ಇರುವದೇ (ಸ್ಥೂಲ)ಶರೀರವೆನಿಸುವದು.

ಪಞ್ಚಪ್ರಾಣಮನೋಬುದ್ಧಿದಶೇನ್ದ್ರಿಯಸಮನ್ವಿತಮ್ ।
ಅಪಞ್ಚೀಕೃತಭೂತೋತ್ಥಂ ಸೂಕ್ಷ್ಮಾಙ್ಗಂ ಭೋಗಸಾಧನಮ್ ॥

೧೩. ಐದು ಪ್ರಾಣಗಳು, ಮನಸ್ಸು, ಬುದ್ಧಿ, ಹತ್ತು ಇಂದ್ರಿಯಗಳು[2] –ಇವುಗಳಿಂದೊಡಗೂಡಿರುವದಾಗಿಯೂ ಅಪಂಚೀಕೃತಭೂತಗಳಿಂದಾಗಿರುವದಾಗಿಯೂ ಭೋಗಕ್ಕೆ ಸಾಧನವಾಗಿಯೂ ಇರುವದೇ ಸೂಕ್ಷ್ಮಶರೀರವು.

ಅನಾದ್ಯವಿದ್ಯಾನಿರ್ವಾಚ್ಯಾ ಕಾರಣೋಪಾಧಿರುಚ್ಯತೇ
ಉಪಾಧಿತ್ರಿತಯಾದನ್ಯಮಾತ್ಮಾನಮವಧಾರಯೇತ್ ೧೪

1. ಪೃಥ್ವಿ, ಅಪ್ಪು, ತೇಜಸ್ಸು, ವಾಯು, ಆಕಾಶ–ಎಂಬ ಭೂತಗಳಲ್ಲಿ ಒಂದೊಂದರಲ್ಲಿಯೂ ಮಿಕ್ಕ ನಾಲ್ಕು ಬೆರೆತು ಪಂಚೀಕೃತವಾದ ಮಹಾಭೂತಗಳಾಗುವವು. ಇವುಗಳಿಂದಲೇ ನಮ್ಮ ಶರೀರವಾಗಿದೆ,

2. ಪ್ರಾಣ, ಅಪಾನ, ವ್ಯಾನ, ಉದಾನ, ಸಮಾನ–ಎಂಬಿವು ಐದು ಪ್ರಾಣಗಳು. ಮನಸ್ಸು–ಸಂಕಲ್ಪಾತ್ಮಕ, ಬುದ್ಧಿ–ನಿಶ್ಚಯಾತ್ಮಕ, ಐದು ಕರ್ಮೇಂದ್ರಿಯಗಳು, ಐದು ಜ್ಞಾನೇಂದ್ರಿಯಗಳು–ಒಟ್ಟು ಹತ್ತು ಇಂದ್ರಿಯಗಳು.

೧೪. ಅನಿರ್ವಾಚ್ಯವಾದ[1] ಅನಾದ್ಯವಿದ್ಯೆಯು ಕಾರಣೋಪಾಧಿಯೆನಿಸುವದು. (ಸ್ಥೂಲಸೂಕ್ಷ್ಮಕಾರಣಗಳೆಂಬ ಈ) ಮೂರು ಉಪಾಧಿಗಳಿಗಿಂತಲೂ ಬೇರೆಯಾಗಿರುವವನೇ ಆತ್ಮನೆಂದು ನಿಶ್ಚಯಿಸಬೇಕು.

**ಪಞ್ಚಕೋಶಾದಿಯೋಗೇನ ತತ್ತನ್ಮಯ ಇವ ಸ್ಥಿತಃ ।**
**ಶುದ್ಧಾತ್ಮಾ ನೀಲವಸ್ತ್ರಾದಿಯೋಗೇನ ಸ್ಫಟಿಕೋ ಯಥಾ ॥ ೧೫ ॥**

೧೫. ಶುದ್ಧನಾದ ಆತ್ಮನು ಪಂಚಕೋಶವೇ ಮುಂತಾದವುಗಳ[3] ಸಂಬಂಧದಿಂದ, ಕಪ್ಪುಬಟ್ಟೆಯೇ ಮುಂತಾದವುಗಳ ಸಂಬಂಧದಿಂದ ಸ್ಫಟಿಕವು ಆಯಾ ಬಣ್ಣವಾಗಿ ತೋರುವಂತೆ, ಆಯಾ ರೂಪನಾಗಿರುವಂತಿರುವನು.

## ೫. ಆತ್ಮಾನಾತ್ಮವಿವೇಕ

**ವಪುಸ್ತುಷಾದಿಭಿಃ ಕೋಶೈರ್ಯುಕ್ತಂ ಯುಕ್ತ್ಯವಘಾತತಃ ।**
**ಆತ್ಮಾನಮಾನ್ತರಂ ಶುದ್ಧಂ ವಿವಿಞ್ಚ್ಯಾತ್ತಣ್ಡುಲಂ ಯಥಾ ॥೧೬॥**

೧೬. ಹೊಟ್ಟಿನಂತಿರುವ ಸ್ಥೂಲಶರೀರವೇ ಮುಂತಾದ ಕೋಶಗಳಿಂದ ಕೂಡಿರುವ ಒಳಗಿನ ಶುದ್ಧನಾದ ಆತ್ಮನನ್ನು (ಭತ್ತವನ್ನು ಕುಟ್ಟಿ) ಅಕ್ಕಿಯ ಕಾಳನ್ನು ಬಿಡಿಸಿಕೊಳ್ಳುವಂತೆ[3] ಯುಕ್ತಿಯಿಂದ ಕುಟ್ಟಿ ಬಿಡಿಸಿಕೊಳ್ಳಬೇಕು.

1. ಅವಿದ್ಯೆಯು ಅನಿರ್ವಾಚ್ಯವೆಂಬುದೂ ಇದೇ ಕಾರಣಶರೀರವೆಂಬುದೂ ಭಾಷ್ಯಗ್ರಂಥಗಳಲ್ಲಿ ಕಂಡುಬರುವದಿಲ್ಲ. ಅನಿರ್ವಾಚ್ಯವೆಂದರೆ ಸತ್ತಲ್ಲ, ಅಸತ್ತಲ್ಲ, ಸದಸತ್ತಲ್ಲ– ಇಂಥ ಒಂದು ಬಗೆಯ ತತ್ತ್ವವೆಂದು ಈಗಿನ ವೇದಾಂತಿಗಳು ಹೇಳುತ್ತಾರೆ. ಪೀಠಿಕೆಯನ್ನು ನೋಡಿ.

2. ಅನ್ನಮಯ, ಪ್ರಾಣಮಯ, ಮನೋಮಯ, ವಿಜ್ಞಾನಮಯ, ಆನಂದಮಯ- ಇವು ಪಂಚಕೋಶಗಳು ; 'ಮುಂತಾದವುಗಳು' ಎಂಬ ಮಾತಿನಿಂದ ಯಾವದನ್ನು ಗ್ರಹಿಸಿದಾರೆಯೋ ತಿಳಿಯದು.

3. ಭತ್ತವನ್ನು ಕುಟ್ಟಿ ಹೊಟ್ಟನ್ನು ಬಿಟ್ಟು ಅಕ್ಕಿಯನ್ನು ತೆಗೆದುಕೊಳ್ಳುವಂತೆ ಅನ್ನಮಯವೇ ಮುಂತಾದ ಕೋಶಗಳನ್ನು ಬಿಟ್ಟು ಆತ್ಮನನ್ನು ಯುಕ್ತಿಯಿಂದ ಅರಿತುಕೊಳ್ಳಬೇಕೆಂದು ಭಾವ ; ಈ ಶ್ಲೋಕದಲ್ಲಿ ರೂಪಕವೂ ಉಪಮಾನಾಲಂಕಾರವೂ ಮಿಶ್ರವಾಗಿವೆ.

ಸದಾ ಸರ್ವಗತೋಽಪ್ಯಾತ್ಮಾ ನ ಸರ್ವತ್ರಾವಭಾಸತೇ |
ಬುದ್ಧಾವೇವಾವಭಾಸೇತ ಸ್ವಚ್ಛೇಷು ಪ್ರತಿಬಿಮ್ಬವತ್ ||೧೭||

೧೭. ಆತ್ಮನು ಯಾವಾಗಲೂ ಸರ್ವವ್ಯಾಪಿಯೇ ಆಗಿದ್ದರೂ ಎಲ್ಲೆಲ್ಲಿಯೂ ತೋರಿಕೊಳ್ಳುವದಿಲ್ಲ, ಸ್ವಚ್ಛದ್ರವ್ಯಗಳಲ್ಲಿಯೇ ಪ್ರತಿಬಿಂಬವು ಬೀಳುವಂತೆ ಬುದ್ಧಿಯಲ್ಲಿಯೇ ತೋರಿಕೊಳ್ಳುತ್ತಾನೆ.

ದೇಹೇನ್ದ್ರಿಯಮನೋಬುದ್ಧಿಪ್ರಕೃತಿಭ್ಯೋ ವಿಲಕ್ಷಣಮ್ |
ತದ್ವೃತ್ತಿಸಾಕ್ಷಿಣಂ ವಿದ್ಯಾದಾತ್ಮಾನಂ ರಾಜವತ್ಸದಾ ||೧೮||

೧೮. ದೇಹ, ಇಂದ್ರಿಯಗಳು, ಮನಸ್ಸು, ಬುದ್ಧಿ, ಪ್ರಕೃತಿ[1]- ಇವುಗಳೆಲ್ಲಕ್ಕಿಂತ ಬೇರೆಯ ಸ್ವಭಾವದವನಾಗಿ ಯಾವಾಗಲೂ ಅವುಗಳ ವೃತ್ತಿಗಳಿಗೆ[2] ಸಾಕ್ಷಿಯಾಗಿರುವ ಆತ್ಮನನ್ನು, ರಾಜನನ್ನು ಅರಿಯುವಂತೆ[3] ಅರಿತುಕೊಳ್ಳಬೇಕು.

ವ್ಯಾಪೃತೇಷ್ವಿನ್ದ್ರಿಯೇಷ್ವಾತ್ಮಾ ವ್ಯಾಪಾರೀವಾವಿವೇಕಿನಾಮ್ |
ದೃಶ್ಯತೇಽಭ್ರೇಷು ಧಾವತ್ಸು ಧಾವನ್ನಿವ ಯಥಾ ಶಶೀ ||೧೯||

೧೯. ಮೋಡಗಳು ಓಡುತ್ತಿರಲು ಅವಿವೇಕಿಗಳಿಗೆ ಚಂದ್ರನು ಓಡುತ್ತಿರುವಂತೆ ಹೇಗೆ ಕಾಣುವನೋ ಅದರಂತೆ ಇಂದ್ರಿಯಗಳು ಕೆಲಸಮಾಡುತ್ತಿರಲು ಆತ್ಮನೂ ಕೆಲಸಮಾಡುತ್ತಿರುವಂತೆ ಅವಿವೇಕಿಗಳಿಗೆ ತೋರುವನು.

ಆತ್ಮಚೈತನ್ಯಮಾಶ್ರಿತ್ಯ ದೇಹೇನ್ದ್ರಿಯಮನೋಧಿಯಃ |
ಸ್ವಕೀಯಾರ್ಥೇಷು ವರ್ತನ್ತೇ ಸೂರ್ಯಾಲೋಕಂ ಯಥಾ ಜನಾಃ||

೨೦. ಸೂರ್ಯನ ಬೆಳಕನ್ನಾಶ್ರಯಿಸಿಯೇ ಜನರು ಕೆಲಸಮಾಡುವಂತೆ, ಆತ್ಮಚೈತನ್ಯವನ್ನು ಆಶ್ರಯಿಸಿಯೇ ದೇಹ, ಇಂದ್ರಿಯಗಳು,

1. ಬುದ್ಧಿಗೂ ಕಾರಣವಾದ ಮೂಲತತ್ತ್ವ, ಇದು ಸಾಂಖ್ಯಪ್ರಕ್ರಿಯೆಯನ್ನನುಸರಿಸಿ ಹೇಳಿದ್ದು. 2. ಕೆಲಸಗಳಿಗೆ,

3. ಸೈನಿಕರು ಕೆಲಸಮಾಡುತ್ತಿರುವಲ್ಲಿ ರಾಜನು ಅಪ್ಪಣೆಮಾಡುತ್ತಾ ಸುಮ್ಮನೆ ಕುಳಿತಿರುವಂತೆ ದೇಹಾದಿಗಳು ದುಡಿಯುತ್ತಿರುವಲ್ಲಿ ಆತ್ಮನು ಸುಮ್ಮನಿರುವನು.

ಮನಸ್ಸು, ಬುದ್ಧಿ- ಇವುಗಳು ತವ್ಮತಮ್ಮ ವಿಷಯವಾದ ಕೆಲಸಗಳಲ್ಲಿ ಪ್ರವರ್ತಿಸುವವು.

**ದೇಹೇನ್ದ್ರಿಯಗುಣಾನ್ ಕರ್ಮಾಣ್ಯಮಲೇ ಸಚ್ಚಿದಾತ್ಮನಿ ।**
**ಅಧ್ಯಸ್ಯನ್ತ್ಯವಿವೇಕೇನ ಗಗನೇ ನೀಲತಾದಿವತ್ ॥೨೧॥**

೨೧. ಆಕಾಶದಲ್ಲಿ ನೀಲವರ್ಣವೇ ಮುಂತಾದವನ್ನು ಆರೋಪಿಸುವಂತೆ ದೇಹೇಂದ್ರಿಯಗಳ ಧರ್ಮಗಳನ್ನೂ ಕರ್ಮಗಳನ್ನೂ ನಿರ್ಮಲನಾದ ಸಚ್ಚಿದಾತ್ಮನಲ್ಲಿ ಅವಿವೇಕದಿಂದ ಆರೋಪಿಸುತ್ತಿರುವರು.

**ಅಜ್ಞಾನಾನ್ಮಾನಸೋಪಾಧೇಃ ಕರ್ತೃತ್ವಾದೀನಿ ಚಾತ್ಮನಿ ।**
**ಕಲ್ಪ್ಯನ್ತೇಽಮ್ಬುಗತೇ ಚನ್ದ್ರೇ ಚಲನಾದಿ ಯಥಾಮ್ಭಸಃ ॥೨೨॥**

೨೨. ನೀರಿನ ಚಲನೆಯೇ ಮುಂತಾದದ್ದನ್ನು ನೀರಿನಲ್ಲಿ ತೋರುವ ಚಂದ್ರಪ್ರತಿಬಿಂಬದಲ್ಲಿ ಕಲ್ಪಿಸುವಹಾಗೆ ಅಜ್ಞಾನದಿಂದ ಮನಸ್ಸೆಂಬ ಉಪಾಧಿಯ ಕರ್ತೃತ್ವವೇ ಮುಂತಾದವುಗಳನ್ನು ಆತ್ಮನಲ್ಲಿ ಕಲ್ಪಿಸುತ್ತಿರುವರು.

**ರಾಗೇಚ್ಛಾಸುಖದುಃಖಾದಿ ಬುದ್ಧೌ ಸತ್ಯಾಂ ಪ್ರವರ್ತತೇ ।**
**ಸುಷುಪ್ತೌ ನಾಸ್ತಿ ತನ್ನಾಶೇ ತಸ್ಮಾದ್ಬುದ್ಧೇಸ್ತು ನಾತ್ಮನಃ ॥೨೩॥**

೨೩. ರಾಗ, ಇಚ್ಛೆ, ಸುಖ, ದುಃಖ—ಮುಂತಾದದ್ದು ಅಂತಃಕರಣವಿರುವಾಗ ತೋರಿಕೊಳ್ಳುವದು, ಸುಷುಪ್ತಿಯಲ್ಲಿ ಆ (ಅಂತಃಕರಣವು) ನಾಶವಾದರೆ (ಇದೂ) ಇರುವದಿಲ್ಲ. ಆದ್ದರಿಂದ ಇದು ಅಂತಃಕರಣಕ್ಕೆ ಸೇರಿದ್ದೇ ಹೊರತು ಆತ್ಮನದಲ್ಲ.

## ೬. ಆತ್ಮನ ನಿಜವಾದ ಸ್ವರೂಪ

**ಪ್ರಕಾಶೋಽರ್ಕಸ್ಯ ತೋಯಸ್ಯ ಶೈತ್ಯಮಗ್ನೇರ್ಯಥೋಷ್ಣತಾ ।**
**ಸ್ವಭಾವಃ ಸಚ್ಚಿದಾನನ್ದನಿತ್ಯನಿರ್ಮಲತಾತ್ಮನಃ ॥೨೪॥**

೨೪. ಹೇಗೆ ಸೂರ್ಯನಿಗೆ ಬೆಳಕು, ನೀರಿಗೆ ತಂಪು, ಬೆಂಕಿಗೆ, ಬಿಸಿ ಇವು ಸ್ವಭಾವವೋ ಹಾಗೆ ಆತ್ಮನು ಸಚ್ಚಿದಾನಂದನೂ ನಿತ್ಯನಿರ್ಮಲನೂ ಆಗಿರುವದು ಸ್ವಭಾವವು.

**ಆತ್ಮನಃ ಸಚ್ಚಿದಂಶಶ್ಚ ಬುದ್ಧೇರ್ವೃತ್ತಿರಿತಿ ದ್ವಯಮ್**
**ಸಂಯೋಜ್ಯ ಚಾವಿವೇಕೇನ ಜಾನಾಮೀತಿ ಪ್ರವರ್ತತೇ ॥ ೨೫ ॥**

೨೫. ಆತ್ಮನ ಸಚ್ಚಿದಂಶ, ಅಂತಃಕರಣದ ವೃತ್ತಿ – ಇವೆರಡನ್ನೂ ಅವಿವೇಕದಿಂದ ಸೇರಿಸಿಕೊಂಡು 'ತಿಳಿಯುತ್ತೇನೆ' ಎಂಬ ಭಾವವುಂಟಾಗುತ್ತದೆ.

**ಆತ್ಮನೋ ವಿಕ್ರಿಯಾ ನಾಸ್ತಿ ಬುದ್ಧೇರ್ಬೋಧೋ ನ ಜಾತ್ವಿತಿ ।**
**ಜೀವಃ ಸರ್ವಮಲಂ ಜ್ಞಾತ್ವಾ ಕರ್ತಾ[1] ದ್ರಷ್ಟೇತಿ ಮುಹ್ಯತಿ ॥೨೬॥**

೨೬. ಆತ್ಮನಿಗೆ ಯಾವಾಗಲೂ ವಿಕಾರವಿಲ್ಲ, ಬುದ್ಧಿಗೆ ಯಾವಾಗಲೂ ಚೈತನ್ಯವಿಲ್ಲ. ಜೀವನು ಸರ್ವದೋಷಗಳನ್ನೂ[2] ಅರಿಯುತ್ತಾ 'ನಾನು ಮಾಡುವಾತನು, ಕಾಣುವಾತನು' ಎಂದು ಭ್ರಾಂತನಾಗುತ್ತಿದ್ದಾನೆ.

**ರಜ್ಜು ಸರ್ಪವದಾತ್ಮಾನಂ ಜೀವಂ ಜ್ಞಾತ್ವಾ ಭಯಂ ವಹೇತ್ ।**
**ನಾಹಂ ಜೀವಃ ಪರಾತ್ಮೇತಿ ಜ್ಞಾತಂ[3] ಚೇನ್ನಿರ್ಭಯೋ ಭವೇತ್ ॥**

೨೭. ಹಗ್ಗವನ್ನು ಹಾವೆಂದು ತಿಳಿದುಕೊಳ್ಳುವಂತೆ ತಾನು ಜೀವನೆಂದು ತಿಳಿದುಕೊಂಡಾಗ ಹೆದರಿಕೊಳ್ಳುವನು ; 'ನಾನು ಜೀವನಲ್ಲ, ಪರಮಾತ್ಮನು'–ಎಂದು ತಿಳಿದುಕೊಂಡರೆ ನಿರ್ಭಯನಾಗುವನು.

1. "ಜ್ಞಾತಾ" ಪಾ॥

2. "ಸರ್ವ–ಮಲಂ" ಎಂದು ಬಿಡಿಸಿದರೆ ಉಪಾಧಿಯಲ್ಲಿರುವ ಕರ್ತೃತ್ವ ಭೋಕ್ತೃತ್ವಪ್ರಯುಕ್ತವಾದ ದೋಷಗಳೆಲ್ಲವನ್ನೂ ತಾನು ಕಾಣುತ್ತಿದ್ದರೂ ಅವುಗಳ ದೋಷವು ತನ್ನಲ್ಲಿ ಉಂಟೆಂದು ಭಾವಿಸಿಕೊಳ್ಳುತ್ತಾನೆ– ಎಂದರ್ಥವಾಗುವದು. "ಸರ್ವಮ್–ಅಲಂ" ಎಂದು ಬಿಡಿಸಿಕೊಂಡರೆ "ಎಲ್ಲವನ್ನೂ ಸ್ಪಷ್ಟವಾಗಿ ನೋಡುತ್ತಿದ್ದರೂ" ಎಂದು ಅರ್ಥವಾಗುತ್ತದೆ.

3. "ಜ್ಞಾತಶ್ಚೇತ್" ಪಾ॥

ಆತ್ಮಾವಭಾಸಯತ್ಯೇಕೋ ಬುದ್ಧ್ಯಾದೀನೀನ್ದ್ರಿಯಾಣಿ ಹಿ[1] ।
ದೀಪೋ ಘಟಾದಿವತ್ಸ್ವಾತ್ಮಾ ಜಡೈಸ್ತೈರ್ನಾವಭಾಸ್ಯತೇ ॥೨೮॥

೨೮. ದೀಪವು ಗಡಿಗೆಯೇ ಮುಂತಾದವುಗಳನ್ನು ಬೆಳಗುವಂತೆ ಆತ್ಮನೊಬ್ಬನೇ ಬುದ್ಧಿಯೇ ಮುಂತಾದ ಇಂದ್ರಿಯಗಳನ್ನು ಬೆಳಗುತ್ತಿರುವನು. ಜಡವಾದ ಅವುಗಳಿಂದ ಅವುಗಳ ಆತ್ಮನು ಪ್ರಕಾಶಿತನಾಗಲಾರನು.

ಸ್ವಬೋಧೇ ನಾನ್ಯಬೋಧೇಚ್ಛಾ ಬೋಧರೂಪತಯಾತ್ಮನಃ
ನ ದೀಪಸ್ಯಾನ್ಯದೀಪೇಚ್ಛಾ ಯಥಾ ಸ್ವಾತ್ಮಪ್ರಕಾಶನೆ ॥೨೯॥

೨೯. ಆತ್ಮ ಜ್ಞಾನರೂಪನಾಗಿಯೇ ಇರುವದರಿಂದ ತನ್ನನ್ನು ಅರಿಯುವದಕ್ಕೆ ಆವನಿಗೆ ಮತ್ತೊಂದು ಜ್ಞಾನದ ಆಪೇಕ್ಷೆಯುಂಟಾಗುವದಿಲ್ಲ ದೀಪವು ತನ್ನನ್ನು ಬೆಳಗುವದಕ್ಕೆ ಮತ್ತೊಂದು ದೀಪವನ್ನು ಹೇಗೆ ಬಯಸದಿರುವದೋ (ಅದರಂತೆಯೇ ಇದು).

## ೭. ಜೀವಪರಮಾತ್ಮೈಕ್ಯ

ನಿಷಿಧ್ಯ ನಿಖಿಲೋಪಾಧೀನ್ನೇತಿ ನೇತೀತಿ ವಾಕ್ಯತಃ ।
ವಿದ್ಯಾದೈಕ್ಯಂ ಮಹಾವಾಕ್ಯೈರ್ಜೀವಾತ್ಮಪರಮಾತ್ಮನೋಃ ॥೩೦॥

೩೦. "ನೇತಿ, ನೇತಿ" (ಇದಲ್ಲ, ಇದಲ್ಲ, ಬೃ. ೩-೯-೨೬) ಎಂಬ ವಾಕ್ಯದಿಂದ ಉಪಾಧಿಗಳನ್ನೆಲ್ಲ ಅಲ್ಲಗಳೆದು ಮಹಾವಾಕ್ಯಗಳಿಂದ[2] ಜೀವಾತ್ಮ ಪರಮಾತ್ಮರುಗಳ ಐಕ್ಯವನ್ನು ಅರಿತುಕೊಳ್ಳಬೇಕು.

ಆವಿದ್ಯಕಂ ಶರೀರಾದಿ ದೃಶ್ಯಂ ಬುದ್ಬುದವತ್ ಕ್ಷರಮ್ ।
ಏತದ್ವಿಲಕ್ಷಣಂ ವಿದ್ಯಾದಹಂ ಬ್ರಹ್ಮೇತಿ ನಿರ್ಮಲಮ್ ॥೩೧॥

1. 'ಬುದ್ಧ್ಯಾದೀನೀನ್ದ್ರಿಯಾಣ್ಯಪಿ' ಪಾ॥

2. ಇಲ್ಲಿ 'ತತ್ತ್ವಮಸಿ' ಮುಂತಾದ ಮಹಾವಾಕ್ಯಗಳನ್ನೇನೂ ವಿಚಾರಮಾಡಿರುವದಿಲ್ಲ, ಮುಖ್ಯವಾಗಿ ಆತ್ಮಾನಾತ್ಮವಿವೇಕದ ಮೂಲಕವಾಗಿಯೇ ಜೀವಾತ್ಮನು ಬ್ರಹ್ಮವೆಂದು ತೋರಿಸುವದಕ್ಕೆ ಹೊರಟಿರುತ್ತದೆ.

೩೧. ಅವಿದ್ಯೆಯಿಂದ ಕಲ್ಪಿತವಾಗಿರುವ ಶರೀರವೇ ಮುಂತಾದ ದೃಶ್ಯವು ನೀರುಗುಳ್ಳೆಯಂತೆ ನಾಶವಾಗತಕ್ಕದ್ದು. ಇದಕ್ಕಿಂತ ಬೇರೆಯು ಸ್ವಭಾವವಾಗಿರುವ ನಿರ್ಮಲವಾದ ಬ್ರಹ್ಮವೇ ನಾನು ಎಂದು ತಿಳಿಯಬೇಕು.

**ದೇಹಾನ್ಯತ್ವಾನ್ನ ಮೇ ಜನ್ಮಜರಾಕಾರ್ಶ್ಯಲಯಾದಯಃ**
**ಶಬ್ದಾದಿವಿಷಯೈಃ ಸಙ್ಗೋ ನಿರಿನ್ದ್ರಿಯತಯಾ ನ ಚ ೩೨**

೩೨. ದೇಹಕ್ಕಿಂತಲೂ ಬೇರೆಯಾಗಿರುವದರಿಂದ ನನಗೆ ಹುಟ್ಟು, ಮುಪ್ಪು, ಬಡಕಲಾಗುವಿಕೆ, ಸಾವು–ಮುಂತಾದವುಗಳಿಲ್ಲ ; ಇಂದ್ರಿಯಗಳಿಲ್ಲದವನಾದ್ದರಿಂದ ಶಬ್ದವೇ ಮುಂತಾದ[1] ವಿಷಯಗಳ ಸಂಬಂಧವೂ ಇಲ್ಲ.

**ಅಮನಸ್ತ್ವಾನ್ನ ಮೇ ದುಃಖರಾಗದ್ವೇಷಭಯಾದಯಃ ।**
**ಅಪ್ರಾಣೋ ಹ್ಯಮನಾಃ ಶುಭ್ರ ಇತ್ಯಾದಿಶ್ರುತಿಶಾಸನಾತ್ ॥ ೩೩ ॥**

೩೩. ನಾನು ಮನಸ್ಸಿಲ್ಲದವನಾದ್ದರಿಂದ ನನಗೆ ದುಃಖ, ರಾಗ, ದ್ವೇಷ, ಭಯ– ಮುಂತಾದವುಗಳು ಯಾವವೂ ಇಲ್ಲ ; 'ಅಪ್ರಾಣೋ ಹ್ಯಮನಾಃ ಶುಭ್ರಃ' (ಪ್ರಾಣವಿಲ್ಲದವನು, ಮನಸ್ಸಿಲ್ಲದವನು, ಶುಭ್ರನಾಗಿರುವವನು, ಮುಂ. ೨–೧–೨) ಎಂಬ ಶ್ರುತಿಯ ಉಪದೇಶವು ಇದಕ್ಕೆ ಪ್ರಮಾಣವು.

**ನಿರ್ಗುಣೋ ನಿಷ್ಕ್ರಿಯೋ ನಿತ್ಯೋ ನಿರ್ವಿಕಲ್ಪೋ ನಿರಞ್ಜನಃ ।**
**ನಿರ್ವಿಕಾರೋ ನಿರಾಕಾರೋ ನಿತ್ಯಮುಕ್ತೋಽಸ್ಮಿ ನಿರ್ಮಲಃ ॥೩೪॥**

೩೪. ನಾನು ನಿರ್ಗುಣನೂ ಕ್ರಿಯಾರಹಿತನೂ ಯಾವ ವಿಕಲ್ಪವೂ ಇಲ್ಲದವನೂ ಯಾವದರ ಅಂಟೂ ಇಲ್ಲದವನೂ ಯಾವ ವಿಕಾರಗಳೂ ಇಲ್ಲದವನೂ ಯಾವ ಆಕಾರವೂ ಇಲ್ಲದವನೂ ನಿರ್ಮಲನೂ ಆಗಿರುವೆನು.

**ಅಹಮಾಕಾಶವತ್ಸರ್ವಂ ಬಹಿರನ್ತರ್ಗತೋಽಚ್ಯುತಃ ।**
**ಸದಾ ಸರ್ವಸಮಃ ಸಿದ್ಧೋ[2] ನಿಸ್ಸಙ್ಗೋ ನಿರ್ಮಲೋಽಚಲಃ**

1. ಶಬ್ದ, ಸ್ಪರ್ಶ, ರೂಪ, ರಸ, ಗಂಧ- ಎಂಬ. 2. 'ಶುದ್ಧೋ' ಪಾ॥

೩೫. ನಾನು ಆಕಾಶದಂತೆ ಎಲ್ಲವರ ಒಳಗೂ ಹೊರಗೂ ವ್ಯಾಪಿಸಿಕೊಂಡು ನನ್ನ ಸ್ಥಿತಿಯಿಂದ ಕೆಳಕ್ಕೆ ಜಾರದೆ ಯಾವಾಗಲೂ ಸರ್ವಸಮನಾಗಿ ಸಿದ್ಧಸ್ವರೂಪನಾಗಿ ಯಾವದೊಂದರ ಸೋಂಕೂ ಇಲ್ಲದೆ ನಿಷ್ಕಲ್ಮಷನಾಗಿ ಅಲುಗಾಡದೆ ಇರುವೆನು.[1]

**ನಿತ್ಯಶುದ್ಧವಿಮುಕ್ತೈಕಮಖಣ್ಡಾನನ್ದಮದ್ವಯಮ್ ।**
**ಸತ್ಯಂ ಜ್ಞಾನಮನನ್ತಂ ಯತ್ಪರಂ ಬ್ರಹ್ಮಾಹಮೇವ ತತ್ ॥ ೩೬ ॥**

೩೬. ಯಾವಾಗಲೂ ಶುದ್ಧವಾಗಿ ಮುಕ್ತಸ್ವರೂಪವುಳ್ಳದ್ದಾಗಿ ಒಂದೇ ಆಗಿ ಅಖಂಡಾನಂದವೂ[2] ತನಗೆರಡನೆಯದಿಲ್ಲದ್ದೂ ಆಗಿ ಸತ್ಯವೂ ಜ್ಞಾನವೂ ಅನಂತವೂ ಆಗಿರುವ ಪರಬ್ರಹ್ಮವಿದೆಯಲ್ಲ, ಅದೇ ನಾನು.

## ೮. ಸಾಧನೆಯ ಆವಶ್ಯಕತೆ

**ಏವಂ ನಿರನ್ತರಕೃತಾ[3] ಬ್ರಹ್ಮೈವಾಸ್ಮೀತಿ ವಾಸನಾ ।**
**ರೋಗಾನಿವ ರಸಾಯನಮ್ ॥ ೩೭ ॥**

೩೭. ಈ ರೀತಿಯಲ್ಲಿ ನಾನು ಬ್ರಹ್ಮವೇ ಆಗಿರುವೆನೆಂದು ಎಡೆಬಿಡದೆ ಅಭ್ಯಾಸಮಾಡಿದ ವಾಸನೆಯು[4], ರಸಾಯನವು[5] ರೋಗಗಳನ್ನು ನಾಶಗೊಳಿಸುವಂತೆ, ಅವಿದ್ಯೆಯಿಂದಾದ ವಿಕ್ಷೇಪಗಳನ್ನು[6] ತೊಲಗಿಸುವದು.

1. ಇಲ್ಲಿ ಬರೆದಿರುವದು ಭಾವಾರ್ಥವಾಗಿದೆ ; ಮೂಲವಾಕ್ಯವು ಸರಳವಾಗಿ ಅನ್ವಯವಾಗುವದಿಲ್ಲ.

2. ವಿಷಯಗಳ ಸಂಬಂಧದಿಂದ ತುಂಡಿಸಿರುವದಲ್ಲದೆ ನಿತ್ಯಾನಂದ.

3. 'ನಿರನ್ತರಾಭ್ಯಸ್ತಾ' ಪಾ||.

4. ಅವಿದ್ಯೆಯಿಂದಾಗಿರುವ ಅಶುಭವಾಸನೆಯನ್ನು ಪರಮಾತ್ಮಧ್ಯಾನದಿಂದಾಗುವ ಶುಭವಾಸನೆಯು ತೊಲಗಿಸುತ್ತದೆ.

5. ಪಾದರಸದಿಂದ ಮಾಡಿದ ಸಿದ್ಧೌಷಧವು ಎಲ್ಲಾ ರೋಗಗಳನ್ನೂ ಬೇಗನೆ ತೊಲಗಿಸುವದೆಂದು ಸಿದ್ಧವೈದ್ಯರ ನಂಬಿಕೆ.

6. ಅತ್ತಿತ್ತ ಹರಿದಾಡುವ ಬುದ್ಧಿವೃತ್ತಿಗಳನ್ನು, ಅನಾತ್ಮವಸ್ತುವನ್ನು ತಿಳಿಸುವ ವೃತ್ತಿಗಳನ್ನು.

**ವಿವಿಕ್ತದೇಶ ಆಸೀನೋ ವಿರಾಗೋ ವಿಜಿತೇನ್ದ್ರಿಯಃ ।**
**ಭಾವಯೇದೇಕಮಾತ್ಮಾನಂ ತಮನನ್ತಮನನ್ಯಧೀಃ ॥ ೩೮ ॥**

೩೮. ಏಕಾಂತಸ್ಥಳದಲ್ಲಿ ಕುಳಿತು ವೈರಾಗ್ಯದಿಂದ ಇಂದ್ರಿಯಗಳನ್ನು ಬಿಗಿಹಿಡಿದುಕೊಂಡು ಅನಂತನಾದ ಆ ಒಬ್ಬ ಆತ್ಮನನ್ನೇ ಧ್ಯಾನಿಸುತ್ತಿರಬೇಕು.

**ಆತ್ಮನ್ಯೇವಾಖಿಲಂ ದೃಶ್ಯಂ ಪ್ರವಿಲಾಪ್ಯ ಧಿಯಾ ಸುಧೀಃ ।**
**ಭಾವಯೇದೇಕಮಾತ್ಮಾನಂ ನಿರ್ಮಲಾಕಾಶವತ್ಸದಾ ॥ ೩೯ ॥**

೩೯. ಜಾಣನಾದವನು ಬುದ್ಧಿಯಿಂದ ದೃಶ್ಯವೆಲ್ಲವನ್ನೂ ಆತ್ಮನಲ್ಲಿಯೇ ಪ್ರವಿಲಯಮಾಡಿಕೊಂಡು[1] ಯಾವಾಗಲೂ ನಿರ್ಮಲಾಕಾಶದಂತೆ ಇರುವ ಒಬ್ಬ ಆತ್ಮನನ್ನೇ ಭಾವಿಸುತ್ತಿರಬೇಕು.

## ೯. ಜ್ಞಾನದಿಂದಾಗುವ ಫಲ

**ರೂಪವರ್ಣಾದಿಕಂ ಸರ್ವಂ ವಿಹಾಯ ಪರಮಾರ್ಥವಿತ್ ।**
**ಪರಿಪೂರ್ಣಚಿದಾನನ್ದಸ್ವರೂಪೇಣಾವತಿಷ್ಠತೇ ॥ ೪೦ ॥**

೪೦. ಪರಮಾರ್ಥವನ್ನು ಬಲ್ಲಾತನು ರೂಪ, ವರ್ಣ– ಮುಂತಾದ್ದೆಲ್ಲವನ್ನೂ ಬಿಟ್ಟು ಪರಿಪೂರ್ಣವಾದ ಚಿದಾನಂದಸ್ವರೂಪದಿಂದ ನಿಂತುಕೊಳ್ಳುವನು.

**ಜ್ಞಾತೃಜ್ಞಾನಜ್ಞೇಯಭೇದಃ ಪರೇ ನಾತ್ಮನಿ ವಿದ್ಯತೇ[2] ।**
**ಚಿದಾನನ್ದೈಕರೂಪತ್ವಾದ್ದೀಪ್ಯತೇ ಸ್ವಯಮೇವ ಹಿ[3] ॥ ೪೧ ॥**

೪೧. ಪರಮಾತ್ಮನಲ್ಲಿ ಜ್ಞಾತೃ, ಜ್ಞಾನ, ಜ್ಞೇಯ– ಎಂಬ ಭೇದವು ಇರುವದಿಲ್ಲ. ಚಿದಾನಂದಸ್ವರೂಪಮಾತ್ರದಿಂದಿರುವದರಿಂದ ಆತ್ಮನು ತಾನೇ ಬೆಳಗುತ್ತಿರುವನು.[4]

1. ಧ್ಯಾನದಿಂದ ಮರೆತು, ಇಲ್ಲವಾಗಿಸಿಕೊಂಡು.
2. 'ಪರಾತ್ಮನಿ ನ ವಿದ್ಯತೇ' ಪಾ॥ 3. 'ತತ್' ಪಾ॥
4. ಈ ಶ್ಲೋಕವು ಸರಳವಾಗಿ ಅನ್ವಯವಾಗುವದಿಲ್ಲ.

ಏವಮಾತ್ಮಾರಣೌ ಧ್ಯಾನಮಥನೇ ಸತತಂ ಕೃತೇ ।
ಉದಿತಾವಗತಿಜ್ವಾಲಾ ಸರ್ವಾಜ್ಞಾನೇನ್ಧನಂ ದಹೇತ್ ॥ ೪೨ ॥

೪೨. ಈ ರೀತಿಯಲ್ಲಿ ಆತ್ಮನೆಂಬ ಅರಣಿಯಲ್ಲಿ[1] ಧ್ಯಾನಮಥನವನ್ನು ಎಡೆಬಿಡದೆ ಮಾಡಿದರೆ ಹುಟ್ಟುವ ಜ್ಞಾನವೆಂಬ ಉರಿಯು ಅಜ್ಞಾನವೆಂಬ ಕಟ್ಟಿಗೆಯೆಲ್ಲವನ್ನೂ ಸುಟ್ಟುಹಾಕುವದು.

ಅರುಣೇನೇವ ಬೋಧೇನ ಪೂರ್ವಂ ಸನ್ತಮಸೇ ಹೃತೇ ।
ತತ ಆವಿರ್ಭವೇದಾತ್ಮಾ ಸ್ವಯಮೇವಾಂಶುಮಾನಿವ ॥ ೪೩ ॥

೪೩. ಅರುಣನು ಮೊದಲು ದಟ್ಟವಾದ ಕತ್ತಲೆಯನ್ನು ಹೋಗಲಾಡಿಸುವಂತೆ ಮೊದಲು ಜ್ಞಾನವು ಅಜ್ಞಾನವನ್ನು ತೊಲಗಿಸಿದ ಮೇಲೆ, ಆತ್ಮನು ಸೂರ್ಯನಂತೆ ತಾನೇ ತೋರಿಕೊಳ್ಳುವನು.

ಆತ್ಮಾ ತು ಸತತಂ ಪ್ರಾಪ್ತೋಽಪ್ಯಪ್ರಾಪ್ತವದವಿದ್ಯಯಾ ।
ತನ್ನಾಶೇ ಪ್ರಾಪ್ತವದ್ಭಾತಿ ಸ್ವಕಣ್ಠಾಭರಣಂ ಯಥಾ ॥ ೪೪ ॥

೪೪. ಮೊದಲಿನಿಂದಲೂ ತನ್ನ ಕೊರಳಿನಲ್ಲಿಯೇ ಇದ್ದ ಒಡವೆಯು ನೆನಪಾದಕೂಡಲೆ ಸಿಕ್ಕಿದಂತೆ ತೋರುವ ಹಾಗೆ, ಆತ್ಮನು ಯಾವಾಗಲೂ ಪ್ರಾಪ್ತನಾಗಿಯೇ ಇದ್ದರೂ ಅವಿದ್ಯೆಯಿಂದ ಸಿಕ್ಕದೆ ಇರುವಂತೆ ತೋರುತ್ತಿದ್ದು ಅವಿದ್ಯೆಯು ನಾಶವಾಗುತ್ತಲೂ ಸಿಕ್ಕಿದಂತೆ ತೋರುವನು.

ಸ್ಥಾಣೌ ಪುರುಷವದ್ಭ್ರಾನ್ತ್ಯಾ ಕೃತಾ ಬ್ರಹ್ಮಣಿ ಜೀವತಾ ।
ಜೀವಸ್ಯ ತಾತ್ತ್ವಿಕೇ ರೂಪೇ ತಸ್ಮಿನ್ ದೃಷ್ಟೇ ನಿವರ್ತತೇ ॥ ೪೫ ॥

೪೫. ಮೋಟುಮರದಲ್ಲಿ ಮನುಷ್ಯನೆಂಬ ಭ್ರಾಂತಿಯುಂಟಾಗುವಂತೆ ಬ್ರಹ್ಮದಲ್ಲಿ ಕಲ್ಪಿತನಾಗಿರುವ ಜೀವತ್ವವು ಜೀವನ ನಿಜವಾದ ಸ್ವರೂಪವು ಅದೇ ಎಂದು ಕಂಡುಕೊಂಡಕೂಡಲೆ ನಾಶವಾಗುವದು.

1 ಕೈವಲ್ಯೋಪನಿಷತ್ತಿನ ೧–೧೧ರ ಸೂಚನೆ.

ತತ್ತ್ವಸ್ವರೂಪಾನುಭವಾದುತ್ಪನ್ನಂ ಜ್ಞಾನಮಂಜಸಾ ।
ಅಹಂ ಮಮೇತಿ ಚಾಜ್ಞಾನಂ ಬಾಧತೇ ದಿಗ್ಭ್ರಮಾದಿವತ್ ॥೪೬॥

೪೬. ತತ್ತ್ವಸ್ವರೂಪದ ಅನುಭವದಿಂದ ಹುಟ್ಟಿದ ಜ್ಞಾನವು 'ನಾನು, ನನ್ನದು'–ಎಂಬ ಅಜ್ಞಾನವನ್ನು ಸರಿಯಾದ ತಿಳಿವಳಿಕೆಯು ದಿಗ್ಭ್ರಮಾದಿಗಳನ್ನು ಹೋಗಲಾಡಿಸುವಂತೆ ಚೆನ್ನಾಗಿ ಹೋಗಲಾಡಿಸುತ್ತದೆ.

ಸಮ್ಯಗ್ವಿಜ್ಞಾನವಾನ್ ಯೋಗೀ ಸ್ವಾತ್ಮನ್ಯೇವಾಖಿಲಂ ಸ್ಥಿತಮ್ ।
ಏವಂ[1] ಚ ಸರ್ವಮಾತ್ಮಾನಮೀಕ್ಷತೇ ಜ್ಞಾನಚಕ್ಷುಷಾ ॥೪೭॥

೪೭. ಸರಿಯಾದ ತಿಳಿವಳಿಕೆಯುಂಟಾದ ಯೋಗಿಯು ಜ್ಞಾನನೇತ್ರದಿಂದ ತನ್ನಲ್ಲಿಯೇ ಎಲ್ಲಾ ಪ್ರಪಂಚವನ್ನೂ ಎಲ್ಲವೂ ತಾನೇ ಎಂಬುದನ್ನೂ ಕಂಡುಕೊಳ್ಳುತ್ತಾನೆ.

ಆತ್ಮೈವೇದಂ ಜಗತ್ಸರ್ವಮಾತ್ಮನೋಽನ್ಯನ್ನ ಕಿಂಚನ[2] ।
ಮೃದೋ ಯದ್ವದ್ಘಟಾದೀನಿ ಸ್ವಾತ್ಮಾನಂ ಸರ್ವಮೀಕ್ಷತೇ ॥೪೮॥

೪೮. ಈ ಜಗತ್ತೆಲ್ಲವೂ ಆತ್ಮನೇ, ಮಣ್ಣಿಗಿಂತ ಬೇರೆಯಾಗಿ ಗಡಿಗೆಯೇ ಮುಂತಾದವುಗಳಿಲ್ಲದಿರುವಂತೆ ಆತ್ಮನಿಗಿಂತ ಬೇರೆಯಾಗಿ ಏನೊಂದೂ ಇರುವದಿಲ್ಲ–[2] ಹೀಗೆಂದು ತನ್ನ ಆತ್ಮನೇ ಸರ್ವವೆಂದು ಕಂಡುಕೊಳ್ಳುವನು.

## ೧೦. ಜೀವನ್ಮುಕ್ತಿ

ಜೀವನ್ಮುಕ್ತಸ್ತು ತದ್ವಿದ್ವಾನ್ಪೂರ್ವೋಪಾಧಿಗುಣಾಂಸ್ತ್ಯಜೇತ್ ।
ಸ ಸಚ್ಚಿದಾದಿಧರ್ಮತ್ವಂ ಭೇಜೇ ಭ್ರಮರಕೀಟವತ್[4] ॥೪೯॥

1. "ಏಕಂ" ಪಾ॥
2. "ನ ವಿದ್ಯತೇ" ಪಾ॥
3. ಜಗತ್ತೆಲ್ಲವೂ ಆತ್ಮಕಾರ್ಯವಾಗಿರುವದರಿಂದ ಅದು ಆತ್ಮನಿಗಿಂತ ಬೇರೆಯಲ್ಲ.
4, "ಸಚ್ಚಿದಾನನ್ದರೂಪತ್ವಾದ್ಭವೇದ್ಭ್ರಮರಕೀಟವತ್" ಪಾ॥

೪೯. ಇದನ್ನರಿತ ಜೀವನ್ಮುಕ್ತನು[1] ಮೊದಲಿನ ಉಪಾಧಿಧರ್ಮಗಳೆಲ್ಲವನ್ನೂ ಬಿಟ್ಟುಬಿಡುವನು. ಅವನು ಭ್ರಮರಕೀಟದಂತೆ[2] ಸತ್ಯಜ್ಞಾನಾದಿಧರ್ಮಗಳನ್ನು ಪಡೆದುಕೊಂಡಿರುತ್ತಾನೆ.

**ತೀರ್ತ್ವಾ ಮೋಹಾರ್ಣವಂ ಹತ್ವಾ ರಾಗದ್ವೇಷಾದಿರಾಕ್ಷಸಾನ್ ।**
**ಯೋಗೀ ಶಾನ್ತಿಸಮಾಯುಕ್ತ[3] ಆತ್ಮಾರಾಮೋ ವಿರಾಜತೇ ॥೫೦॥**

೫೦. ಯೋಗಿಯಾದವನು ಮೋಹವೆಂಬ ಸಾಗರವನ್ನು ದಾಟಿ ರಾಗದ್ವೇಷಗಳೇ ಮುಂತಾದ ರಾಕ್ಷಸರನ್ನು ಕೊಂದು ಶಾಂತಿಯಿಂದ ಕೂಡಿಕೊಂಡು ಆತ್ಮಾರಾಮನಾಗಿ ಬೆಳಗುತ್ತಿರುವನು[4]

**ಬಾಹ್ಯಾನಿತ್ಯಸುಖಾಸಕ್ತಿಂ ಹಿತ್ವಾತ್ಮಸುಖನಿರ್ವೃತಃ ।**
**ಘಟಸ್ಥದೀಪವಚ್ಛಶ್ವದನ್ತರೇವ[5] ಪ್ರಕಾಶತೇ ॥೫೧॥**

೫೧. ಹೊರಗಿನ ಅನಿತ್ಯವಾದ ಸುಖದ ಆಸಕ್ತಿಯನ್ನು ಬಿಟ್ಟು ಆತ್ಮಸುಖದಿಂದ ಆನಂದವನ್ನು ಹೊಂದಿ ಗಡಿಗೆಯೊಳಗಿನ ದೀಪದಂತೆ ಯಾವಾಗಲೂ ಒಳಗೇ ಬೆಳಗುತ್ತಿರುವನು.

**ಉಪಾಧಿಸ್ಥೋಽಪಿ ತದ್ಧರ್ಮೈರಲಿಪ್ತೋ ವ್ಯೋಮವನ್ಮುನಿಃ ।**
**ಸರ್ವವಿನ್ಮೂಢವತ್ತಿಷ್ಠೇದಸಕ್ತೋ ವಾಯುವಚ್ಚರೇತ್ ॥೫೨॥**

1. ಬದುಕಿರುವಾಗಲೇ ಬಂಧದಿಂದ ಬಿಡುಗಡೆಯನ್ನು ಹೊಂದಿದವನು.

2. ಭ್ರಮರವನ್ನು ಕಂಡು ಅಂಜಿ ಅದನ್ನೇ ಧ್ಯಾನಮಾಡುತ್ತಿದ್ದ ಹುಳು ಭ್ರಮರವೇ ಆಗುವಂತೆ ಎಂದು ಭಾವ. ಪೀಠಿಕೆಯನ್ನು ನೋಡಿ.

3. "ಸಮಾಯುಕ್ತೋ ಹ್ಯಾತ್ಮಾರಾಮೋ" ಪಾ॥

4. ರಾಮಾಯಣದ ಕಥೆಗೆ ಅಧ್ಯಾತ್ಮಪರವಾದ ವಿವರಣೆಯನ್ನು ಇಲ್ಲಿ ಕೊಟ್ಟಿರುತ್ತದೆ.

5. "ದೀಪವತ್ಸ್ವಚ್ಛಃ ಸ್ವಾನ್ತರೇವ" ಪಾ॥

೫೨. ಮುನಿಯಾದವನು ಉಪಾಧಿಗಳ ನಡುವೆಯಿದ್ದರೂ ಆಕಾಶದಂತೆ ಅವುಗಳ ಧರ್ಮಗಳ ಅಂಟಿಲ್ಲದೆ, ಎಲ್ಲವನ್ನೂ ಬಲ್ಲವನಾಗಿದ್ದರೂ ಮೂಢನಂತೆ ಇರುವನು. ಗಾಳಿಯಂತೆ[1] ಆಸಕ್ತಿಯಿಲ್ಲದೆ ಸಂಚರಿಸುತ್ತಿರುವನು.

## ೧೧. ವಿದೇಹಮುಕ್ತಿ

**ಉಪಾಧಿವಿಲಯಾದ್ವಿಷ್ಣೌ ನಿರ್ವಿಶೇಷಂ ವಿಶೇನ್ಮುನಿಃ ।**
**ಜಲೇ ಜಲಂ ವಿಯದ್ವ್ಯೋಮ್ನಿ ತೇಜಸ್ತೇಜಸಿ ವಾ ಯಥಾ ॥೫೩॥**

೫೩. ಉಪಾಧಿಯು ನಾಶವಾದ ಅನಂತರ ಆ ಮುನಿಯು ನೀರು ನೀರಿನಲ್ಲಿ, ಆಕಾಶವು ಆಕಾಶದಲ್ಲಿ, ಅಥವಾ ಬೆಳಕು ಬೆಳಕಿನಲ್ಲಿ ಹೇಗೆ ಸೇರಿಕೊಳ್ಳುವದೋ ಹಾಗೆ ಯಾವದೊಂದು ಭೇದವೂ ಇಲ್ಲದೆ ವಿಷ್ಣುವಿನಲ್ಲಿ ಸೇರಿಕೊಳ್ಳುವನು.

## ೧೨. ಬ್ರಹ್ಮಸ್ವರೂಪ

**ಯಲ್ಲಾಭಾನ್ನಾಪರೋ ಲಾಭೋ ಯತ್ಸುಖಾನ್ನಾಪರಂ ಸುಖಮ್ ।**
**ಯಜ್ಜ್ಞಾನಾನ್ನಾಪರಂ ಜ್ಞಾನಂ ತದ್ಬ್ರಹ್ಮೇತ್ಯವಧಾರಯೇತ್॥೫೪॥**

೫೪. ಯಾವದನ್ನು ಪಡೆಯುವದಕ್ಕಿಂತಲೂ ಹೆಚ್ಚಿನ ಲಾಭವಿಲ್ಲವೋ, ಯಾವದರ ಸುಖಕ್ಕಿಂತಲೂ ಹೆಚ್ಚಿನ ಸುಖವಿಲ್ಲವೋ ಯಾವದರ ಜ್ಞಾನಕ್ಕಿಂತಲೂ ಹೆಚ್ಚಿನ ಜ್ಞಾನವಿಲ್ಲವೋ ಅದೇ ಬ್ರಹ್ಮವೆಂದು ನಿಶ್ಚಯಿಸಬೇಕು.

**ಯದ್ದೃಷ್ಟ್ವಾ ನಾಪರಂ ದೃಶ್ಯಂ ಯದ್ಭೂತ್ವಾ ನ ಪುನರ್ಭವೇತ್ ।**
**ಯಜ್ಜ್ಞಾತ್ವಾ ನಾಪರಂ ಜ್ಞೇಯಂ ತದ್ಬ್ರಹ್ಮೇತ್ಯವಧಾರಯೇತ್ ॥**

೫೫. ಯಾವದನ್ನು ಕಂಡಮೇಲೆ ಬೇರೆ ಕಾಣತಕ್ಕದ್ದು ಇರುವದಿಲ್ಲವೋ, ಯಾವದು ತಾನಾದಮೇಲೆ ಮತ್ತೆ ಜನ್ಮವೇ ಇಲ್ಲವೋ, ಯಾವದನ್ನು

1. ಗಾಳಿಯು ಸುವಾಸನೆಯ ಸ್ಥಳವನ್ನೂ ದುರ್ವಾಸನೆಯ ಸ್ಥಳವನ್ನೂ ಪಕ್ಷಪಾತರಹಿತವಾಗಿ ಹಾದುಹೋಗುವಂತೆ,

ತಿಳಿದುಕೊಂಡರೆ ಮತ್ತೊಂದು ತಿಳಿಯತಕ್ಕದ್ದು ಇರುವದಿಲ್ಲವೋ, ಅದೇ ಬ್ರಹ್ಮವೆಂದು ನಿಶ್ಚಯಿಸಬೇಕು.

**ತಿರ್ಯಗೂರ್ಧ್ವಮಧಃ ಪೂರ್ಣಂ ಸಚ್ಚಿದಾನನ್ದಮದ್ವಯಮ್[1] ।**
**ಅನನ್ತಂ ನಿತ್ಯಮೇಕಂ ಯತ್ತದ್ಬ್ರಹ್ಮೇತ್ಯವಧಾರಯೇತ್ ॥ ೫೬ ॥**

೫೬. ಅಡ್ಡಡ್ಡಲಾಗಿಯೂ ಮೇಲುಗಡೆಯೂ ಕೆಳಗಡೆಯೂ ತುಂಬಿಕೊಂಡಿರುವ ಸಚ್ಚಿದಾನಂದರೂಪವೂ ತನಗೆರಡನೆಯದಿಲ್ಲದ್ದೂ ಅನಂತವೂ ನಿತ್ಯವೂ ಒಂದೇಒಂದೂ ಆಗಿರುವದು ಯಾವದೋ ಅದೇ ಬ್ರಹ್ಮವೆಂದು ನಿಶ್ಚಯಿಸಬೇಕು.

**ಅತದ್ವ್ಯಾವೃತ್ತಿರೂಪೇಣ ವೇದಾನ್ತೈರ್ಲಕ್ಷ್ಯತೇಽವ್ಯಯಮ್ ।**
**ಅಖಣ್ಡಾನನ್ದಮೇಕಂ ಯತ್ತದ್ಬ್ರಹ್ಮೇತ್ಯವಧಾರಯೇತ್ ೫೭**

೫೭. ಅದಲ್ಲದ್ದನ್ನು ಅಲ್ಲಗಳೆಯುವ ರೀತಿಯಿಂದ[2] ವೇದಾಂತವಚನಗಳು ನಾಶರಹಿತವೂ ಅಖಂಡಾನಂದವೂ ಆದ ಯಾವದೊಂದನ್ನು ಲಕ್ಷಣೆಯಿಂದ[3] ತಿಳಿಯಿಸುವವೋ ಅದೇ ಬ್ರಹ್ಮವೆಂದು ನಿಶ್ಚಯಿಸಬೇಕು.

1, 'ಅವ್ಯಯಮ್' ಪಾ॥

2, ಬ್ರಹ್ಮವನ್ನು ಮಾತುಗಳಿಂದ ಇಂಥದ್ದೆಂದು ವರ್ಣಿಸಿ ಹೇಳುವದಕ್ಕೆ ಬರುವದಿಲ್ಲ ; ಏಕೆಂದರೆ ನಾಮ, ರೂಪ, ಜಾತಿ, ಕ್ರಿಯಾ–ಮುಂತಾದವುಗಳು ಯಾವವೂ ಅದರಲ್ಲಿರುವದಿಲ್ಲ. ಆದ್ದರಿಂದ ಬ್ರಹ್ಮವು ಇಂಥದ್ದಲ್ಲವೆಂಬ ರೀತಿಯಿಂದಲೇ ಶ್ರುತಿವಾಕ್ಯಗಳು ಅದನ್ನು ತಿಳಿಸುತ್ತವೆ.

3. 'ಗಂಗೆಯಲ್ಲಿ ಹಳ್ಳಿಯಿದೆ' ಎಂಬ ವಾಕ್ಯದಲ್ಲಿ ಗಂಗೆಯೆಂದರೆ ಆ ಹೆಸರಿನ ಒಂದು ನದಿ ಎಂಬ ವಾಚ್ಯಾರ್ಥವನ್ನು ಬಿಟ್ಟು ಗಂಗೆಯ ದಡವೆಂಬ ಲಕ್ಷ್ಯಾರ್ಥವನ್ನೇ ತೆಗೆದುಕೊಳ್ಳಬೇಕಾಗುವಂತೆ, ಬ್ರಹ್ಮವನ್ನು ಹೇಳುವ ಮಾತುಗಳ ವಾಚ್ಯಾರ್ಥವನ್ನು ಗ್ರಹಿಸದೆ ಲಕ್ಷ್ಯಾರ್ಥವನ್ನೇ ತೆಗೆದುಕೊಳ್ಳಬೇಕು. ಏಕೆಂದರೆ ವಾಚ್ಯಾರ್ಥವೆಲ್ಲವೂ ಅನಾತ್ಮವನ್ನೇ ತಿಳಿಸುವದು–ಎಂದು ಭಾವ.

ಅಖಣ್ಡಾನನ್ದರೂಪಸ್ಯ ತಸ್ಯಾನನ್ದಲವಾಶ್ರಿತಾಃ ।
ಬ್ರಹ್ಮಾದ್ಯಾಸ್ತಾರತಮ್ಯೇನ ಭವನ್ತ್ಯಾನನ್ದಿನೋಽಖಿಲಾಃ[1] ॥ ೫೮ ॥

೫೮. ಅಖಂಡಾನಂದರೂಪವಾದ ಅದರ ಆನಂದಲೇಶವನ್ನು ಆಶ್ರಯಿಸಿಕೊಂಡು ಬ್ರಹ್ಮನೇ ಮುಂತಾದವರೆಲ್ಲರೂ ಒಬ್ಬರು ಹೆಚ್ಚು, ಇನ್ನೊಬ್ಬರು ಕಡಿಮೆ– ಹೀಗೆ ಯೋಗ್ಯತಾನುಸಾರವಾಗಿ ಆನಂದಿಗಳಾಗಿರುತ್ತಾರೆ.[2]

ತದ್ಯುಕ್ತಮಖಿಲಂ ವಸ್ತು ವ್ಯವಹಾರಶ್ಚಿದನ್ವಿತಃ ।
ತಸ್ಮಾತ್ಸರ್ವಗತಂ ಬ್ರಹ್ಮ ಕ್ಷೀರೇ ಸರ್ಪಿರಿವಾಖಿಲೇ ॥ ೫೯ ॥

೫೯. ಎಲ್ಲಾ ವಸ್ತುವೂ ಅದರಿಂದ ಕೂಡಿರುವದು, ವ್ಯವಹಾರವು ಜ್ಞಾನದೊಡನೆ ಕೂಡಿಕೊಂಡೇ ಇರುತ್ತದೆ. ಆದ್ದರಿಂದ ಹಾಲಿನಲ್ಲೆಲ್ಲ ತುಪ್ಪವಿರುವಂತೆ ಬ್ರಹ್ಮವು ಸರ್ವವನ್ನೂ ವ್ಯಾಪಿಸಿರುತ್ತದೆ.[3]

ಅನಣ್ವಸ್ಥೂಲಮಹ್ರಸ್ವಮದೀರ್ಘಮಜಮವ್ಯಯಮ್ ।
ಅರೂಪಗುಣವರ್ಣಾಖ್ಯಂ ತದ್ಬ್ರಹ್ಮೇತ್ಯವಧಾರಯೇತ್ ॥ ೬೦ ॥

೬೦. ಸೂಕ್ಷ್ಮವಲ್ಲದೆ, ಸ್ಥೂಲವಲ್ಲದೆ, ಮೋಟಕಲ್ಲದೆ, ನೀಳವಲ್ಲದೆ, ಹುಟ್ಟುವದಲ್ಲದೆ, ಅಳಿಯುವದಲ್ಲದೆ, ರೂಪವಿಲ್ಲದೆ, ಗುಣವಿಲ್ಲದೆ, ಬಣ್ಣವಿಲ್ಲದೆ, ಹೆಸರಿಲ್ಲದೆ[4]– ಇರುವದು ಯಾವದೋ ಅದು ಬ್ರಹ್ಮವೆಂದು ನಿಶ್ಚಯಿಸಬೇಕು.

ಯದ್ಭಾಸಾ ಭಾಸ್ಯತೇಽರ್ಕಾದಿ ಭಾಸ್ಯೈರ್ಯತ್ತು ನ ಭಾಸ್ಯತೇ ।
ಯೇನ ಸರ್ವಮಿದಂ ಭಾತಿ ತದ್ಬ್ರಹ್ಮೇತ್ಯವಧಾರಯೇತ್ ॥ ೬೧ ॥

1. 'ಭವನ್ತ್ಯಾನನ್ದಿನೋ ಲವಾಃ ಪಾ॥

2. ಬೃ, ೪–೩–೩೩ ಮತ್ತು ತೈ. ೨–೮ರ ಸೂಚನೆ.

3. ಬ್ರಹ್ಮವು ಸಚ್ಚಿದಾನಂದರೂಪದಿಂದ ಎಲ್ಲವನ್ನೂ ವ್ಯಾಪಿಸಿಕೊಂಡಿದೆಯೆಂಬುದನ್ನು ಈ ಶ್ಲೋಕದಲ್ಲಿಯೂ ಹಿಂದಿನ ಶ್ಲೋಕದಲ್ಲಿಯೂ ತಿಳಿಸಿರುತ್ತದೆ.

4. ಬೃ. ೩–೮–೮ರ ಸೂಚನೆ.

೬೧. ಯಾವದರ ಬೆಳಕಿನಿಂದ ಸೂರ್ಯನೇ ಮುಂತಾದದ್ದು ಬೆಳಗಲ್ಪಡುವದೋ, ಹಾಗೆ ಬೆಳಗಲ್ಪಡುವ ಸೂರ್ಯಾದಿಗಳಿಂದ ಯಾವದು ಬೆಳಗಲ್ಪಡುವದಿಲ್ಲವೋ, ಯಾವದರಿಂದ ಇದೆಲ್ಲವೂ ಬೆಳಗುತ್ತಿರುವದೋ[1] ಅದೇ ಬ್ರಹ್ಮವೆಂದು ನಿಶ್ಚಯಿಸಬೇಕು.

**ಸ್ವಯಮನ್ತರ್ಬಹಿರ್ವ್ಯಾಪ್ಯ ಭಾಸಯನ್ನಖಿಲಂ ಜಗತ್ ।**
**ಬ್ರಹ್ಮ ಪ್ರಕಾಶತೇ ವಹ್ನಿಪ್ರತಪ್ತಾಯಸಪಿಣ್ಡವತ್ ॥ ೬೨ ॥**

೬೨. ಜಗತ್ತೆಲ್ಲವನ್ನೂ ತಾನೇ ಒಳಗೂ ಹೊರಗೂ ವ್ಯಾಪಿಸಿಕೊಂಡು ಬೆಂಕಿಯಿಂದ ಕಾದ ಕಬ್ಬಿಣದ ಗುಂಡಿನಂತೆ[2] ಬ್ರಹ್ಮವು ಬೆಳಗುತ್ತಿರುವದು.

**ಜಗದ್ವಿಲಕ್ಷಣಂ ಬ್ರಹ್ಮ ಬ್ರಹ್ಮಣೋಽನ್ಯನ್ನ ಕಿಞ್ಚನ ।**
**ಬ್ರಹ್ಮಾನ್ಯದ್ಭಾತಿ ಚೇನ್ಮಿಥ್ಯಾ ಯಥಾ ಮರುಮರೀಚಿಕಾ ॥ ೬೩ ॥**

೬೩. ಬ್ರಹ್ಮವು, ಜಗತ್ತಿಗಿಂತ ಬೇರೆಯ ಸ್ವರೂಪದ್ದಾಗಿರುವದು. ಬ್ರಹ್ಮಕ್ಕಿಂತ ಬೇರೆಯಾಗಿ ಮತ್ತೆ ಯಾವದೂ ಇರುವದಿಲ್ಲ. ಬ್ರಹ್ಮಕ್ಕಿಂತ ಬೇರೆಯಾದದ್ದು ತೋರಿದರೆ ಅದು ಮರುಭೂಮಿಯಲ್ಲಿ ತೋರುವ ಬಿಸಿಲು ಕುದುರೆಯಂತೆ ಮಿಥ್ಯೆಯೇ.

**ದೃಶ್ಯತೇ ಶ್ರೂಯತೇ ಯದ್ಯದ್ಬ್ರಹ್ಮಣೋಽನ್ಯನ್ನ ತದ್ಭವೇತ್ ।**
**ತತ್ತ್ವಜ್ಞಾನಾಚ್ಚ ತದ್ಬ್ರಹ್ಮ ಸಚ್ಚಿದಾನನ್ದಮದ್ವಯಮ್ ॥ ೬೪ ॥**

೬೪. ಯಾವಯಾವದು ಕಾಣುವದೋ ಕೇಳಬರುವದೋ[3] ಅದು ಬ್ರಹ್ಮಕ್ಕಿಂತ ಬೇರೆಯಾಗಿರಲಾರದು. ತತ್ತ್ವಜ್ಞಾನದಿಂದ ನೋಡಿದರೆ ಆ ಬ್ರಹ್ಮವು ಸಚ್ಚಿದಾನಂದರೂಪವಾಗಿಯೂ ತನಗೆರಡನೆಯದಿಲ್ಲದ್ದಾಗಿಯೂ ಇರುವದು.

1. ಮು. ೨-೨-೧೦ರ ಸೂಚನೆ.

2. ಕಾದ ಕಬ್ಬಿಣದ ಗುಂಡನ್ನು ಬೆಳಗುತ್ತಾ ಬೆಂಕಿಯು ಬೆಳಗುವಂತೆ ಎಂದರ್ಥ, ಮೂಲದಲ್ಲಿರುವಂತೆ ಅಕ್ಷರಾರ್ಥವನ್ನು ಮೇಲೆ ಕೊಟ್ಟಿದೆ.

3. ನಾ. ೨೫ರ ಸೂಚನೆ.

## ೧೩. ಬ್ರಹ್ಮಪ್ರಾಪ್ತಿಯು ಯಾರಿಗಾಗುವದು ?

**ಸರ್ವಗಂ ಸಚ್ಚಿದಾನನ್ದಂ[1] ಜ್ಞಾನಚಕ್ಷುರ್ನಿರೀಕ್ಷತೇ ।**
**ಅಜ್ಞಾನಚಕ್ಷುರ್ನೇಕ್ಷೇತ ಭಾಸ್ವನ್ತಂ ಭಾನುಮನ್ಧವತ್ ॥ ೬೫ ॥**

೬೫. ಎಲ್ಲೆಲ್ಲಿಯೂ ವ್ಯಾಪ್ತವಾಗಿರುವ ಸಚ್ಚಿದಾನಂದವನ್ನು ಜ್ಞಾನ ಚಕ್ಷುವಾದವನು ಕಾಣಬಲ್ಲನು ; ಬೆಳಗುತ್ತಿರುವ ಸೂರ್ಯನನ್ನು ಕುರುಡನು ಕಾಣದಿರುವಂತೆ ಅಜ್ಞಾನಚಕ್ಷುವು ಅದನ್ನು ಕಾಣಲಾರನು.[2]

**ಶ್ರವಣಾದಿಭಿರುದ್ದೀಪ್ತಜ್ಞಾನಾಗ್ನಿಪರಿತಾಪಿತಃ ।**
**ಜೀವಃ ಸರ್ವಮಲಾನ್ಮುಕ್ತಃ ಸ್ವರ್ಣವದ್ದ್ಯೋತತೇ ಸ್ವಯಮ್ ॥೬೬॥**

೬೬. ಶ್ರವಣಾದಿಗಳಿಂದ ಹೊತ್ತಿಕೊಂಡುರಿಯುವ ಜ್ಞಾನಾಗ್ನಿಯ ಸಂತಾಪದಿಂದ ಜೀವನು ಸರ್ವಮಲದಿಂದಲೂ ಮುಕ್ತನಾಗಿ ತಾನೇ ಚಿನ್ನದಂತೆ ಬೆಳಗುವನು.[3]

**ಹೃದಾಕಾಶೋದಿತೋ ಹ್ಯಾತ್ಮಾ ಬೋಧಭಾನುಸ್ತಮೋಽಪಹೃತ್ ।**
**ಸರ್ವವ್ಯಾಪೀ ಸರ್ವಧಾರೀ ಭಾತಿ ಭಾಸಯತೇಽಖಿಲಮ್ ॥ ೬೭ ॥**

೬೭. ಹೃದಯಾಕಾಶದಲ್ಲಿ ಹುಟ್ಟಿರುವ ಆತ್ಮನೆಂಬ ಜ್ಞಾನಸೂರ್ಯನು ತಮಸ್ಸನ್ನು ಹೋಗಲಾಡಿಸುತ್ತಾ ಸರ್ವವನ್ನೂ ವ್ಯಾಪಿಸಿಕೊಂಡು ಸರ್ವವನ್ನೂ ಧರಿಸಿ ತಾನೂ ಬೆಳಗುತ್ತಾನೆ.

1. 'ಸಚ್ಚಿದಾತ್ಮಾನಂ' ಪಾ॥

2. ಗೀತೆ ೧೫–೧೦ರ ಸೂಚನೆ.

4. ಚಿನ್ನಕ್ಕೆ ಬೇರೆ ಲೋಹಗಳು ಬೆರಕೆಯಾಗಿದ್ದಾಗ ಅದು ಚೆನ್ನಾಗಿ ಹೊಳೆಯು ಯುವದಿಲ್ಲ, ಪುಟವಿಟ್ಟು ಕಾಯಿಸಿದಮೇಲೆ ಕಸರೆಲ್ಲವೂ ಕರಗಿಹೋಗುವದರಿಂದ ಅದು ತನ್ನ ನಿಜವಾದ ಹೊಳಪನ್ನು ಹೊಂದುವದು. ಇದರಂತೆ ಜೀವನು ಶ್ರವಣಮನನ ನಿದಿಧ್ಯಾಸನಗಳಿಂದ ಜ್ಞಾನವು ಹುಟ್ಟುತ್ತಲೂ ಹಿಂದಿನ ಪಾಪಪುಣ್ಯಗಳೆಲ್ಲವೂ ಸುಟ್ಟು ಹೋಗಿ ಸ್ವಚ್ಛವಾದ ಸ್ವಪ್ರಕಾಶಚೈತನ್ಯದಿಂದ ಉಳಿದುಕೊಳ್ಳುತ್ತಾನೆ.

ದಿಗ್ದೇಶಕಾಲಾದ್ಯನಪೇಕ್ಷ್ಯ ಸರ್ವಗಂ
ಶೀತಾದಿಹೃನ್ನಿತ್ಯಸುಖಂ ನಿರಞ್ಜನಮ್ ।
ಯಃ ಸ್ವಾತ್ಮತೀರ್ಥಂ ಭಜತೇ ವಿನಿಷ್ಕ್ರಿಯಃ
ಸ ಸರ್ವವಿತ್ಸರ್ವಗತೋಽಮೃತೋ ಭವೇತ್ ॥ ೬೮ ॥

೬೮. ಯಾವಾತನು ದಿಕ್ಕು, ದೇಶ, ಕಾಲ– ಮುಂತಾದವುಗಳನ್ನು ನೋಡದೆ ಸರ್ವವ್ಯಾಪಿಯೂ ಶೀತವೇ ಮುಂತಾದವನ್ನು ಪರಿಹರಿಸುವದಾಗಿಯೂ ನಿತ್ಯಾನಂದರೂಪವಾಗಿಯೂ ಮತ್ತೊಂದರ ಲೇಪವಿಲ್ಲದ್ದಾಗಿಯೂ ಇರುವ ತನ್ನ ಆತ್ಮನೆಂಬ ತೀರ್ಥವನ್ನು[1] ಯಾವ ಕ್ರಿಯೆಯನ್ನೂ ಮಾಡದೆ ಭಜಿಸುವನೋ ಅವನು ಸರ್ವಜ್ಞನೂ ಸರ್ವವ್ಯಾಪಿಯೂ ಅಮೃತನೂ ಆಗುವನು.

1. ಕಾಶ್ಯಾದಿಕ್ಷೇತ್ರಗಳಲ್ಲಿರುವ ತೀರ್ಥಗಳಲ್ಲಿ ಪರ್ವಕಾಲಗಳಲ್ಲಿ ಪೂರ್ವಾಭಿಮುಖನಾಗಿ ಸ್ನಾನಮಾಡಿ ತರ್ಪಣಾದಿಗಳನ್ನು ಆಚರಿಸುವದರಿಂದ ಪುಣ್ಯವು ಲಭಿಸುವದು. ಪರಲೋಕದಲ್ಲಿ ಗತಿಯಾಗುವದು– ಎಂದು ಶಾಸ್ತ್ರವಚನವಿದೆ. ಆತ್ಮತೀರ್ಥದಲ್ಲಿ ಮುಳುಗುವದಕ್ಕೆ, ಎಂದರೆ ಆತ್ಮಜ್ಞಾನದಿಂದ ಕೃತಾರ್ಥನಾಗುವದಕ್ಕೆ ಯಾವ ನಿಯಮವೂ ಇಲ್ಲ, ಆದರಿಂದ ಅನಂತವಾದ ಫಲವು ಇಲ್ಲಿಯೇ ದೊರಕುವದು.

# ಪರಿಶಿಷ್ಟ

## ೧. ಉಪಮಾನಗಳ ಅಕ್ಷರಾನುಕ್ರಮಣಿಕೆ

(ಇಲ್ಲಿ ಕೊಟ್ಟಿರುವ ಸಂಖ್ಯೆಗಳು ಶ್ಲೋಕಗಳ ಸಂಖ್ಯೆಗಳು)

**ಆಕಾಶ :** ಉಪಾಧಿಯಿಂದ ಬೇರೆಬೇರೆಯಾಗಿ ತೋರುವದು ೧೦; ಇದರಲ್ಲಿ ನೀಲಿಯಬಣ್ಣವಿರುವಂತೆ ಭ್ರಾಂತಿಯಿಂದ ತೋರುತ್ತದೆ ೨೧, ಇದು ಸ್ವಭಾವದಿಂದ ನಿರ್ಮಲವಾಗಿರುತ್ತದೆ ೩೫; ಇದರಲ್ಲಿ ಮತ್ತೇತರ ಸೋಂಕೂ ಇರುವದಿಲ್ಲ ೫೨, ಉಪಾಧಿಯ ಆಕಾಶವು ದೊಡ್ಡ ಆಕಾಶದಲ್ಲಿ ಬೆರೆತುಕೊಂಡರೆ ಮೊದಲಿನ ಉಪಾಧಿಯಾಕಾಶವಿದೆಂಬ ಗುರುತು ಸಿಕ್ಕುವದಿಲ್ಲ ೫೩.

**ಅಕ್ಕಿ :** ಹೊಟ್ಟನ್ನು ಕುಟ್ಟಿ ತೆಗೆದುಹಾಕಿ ಇದನ್ನು ಪಡೆಯಬೇಕು ೧೬

**ಅರುಣ :** ಇವನು ಮೊದಲು ಕತ್ತಲೆಯನ್ನು ತೊಲಗಿಸುತ್ತಾನೆ, ಆಮೇಲೆ ಸೂರ್ಯನು ತಾನೇ ಬೆಳಗುತ್ತಾನೆ ೪೩.

**ಕತ್ತಲಿನಲ್ಲಿದ್ದ ಒಡವೆ** ಇದು ಕತ್ತಿನಲ್ಲಿದ್ದು ಮರೆತುಹೋಗಿ ಯಾರಾದರೂ ಇಲ್ಲಿದೆ ಎಂದು ತಿಳಿಸಿಕೊಟ್ಟರೆ ಹೊಸದಾಗಿ ಸಿಕ್ಕಿದಂತೆ ಸಂತೋಷವನ್ನುಂಟುಮಾಡುವದು ೪೪.

**ಕನಸು :** ಎಚ್ಚರವಾಗುವವರೆಗೂ ನಿಜವೆಂಬಂತೆ ತೋರುವದು ೬.

**ಕಪ್ಪೆಯಚಿಪ್ಪು :** ಭ್ರಾಂತಿಯಿಂದ ಬೆಳ್ಳಿಯಂತೆ ತೋರುವದು ೭.

**ಕಾದ ಕಬ್ಬಿಣ :** ಇದರಲ್ಲಿ ತೋರುವ ಪ್ರಕಾಶವು ಬೆಂಕಿಯದೇ ೬೨,

**ಚಂದ್ರ :** ಮೋಡಗಳು ಓಡಿದರೆ ತಾನೇ ಓಡುವಂತೆ ಕಾಣುತ್ತಾನೆ ೧೯. ನೀರು ಅಲುಗಾಡಿದರೆ ಚಂದ್ರಬಿಂಬವೂ ಅಲುಗಾಡುವಂತೆ ಕಾಣುವದು ೨೨.

**ಚಿಲ್ಲದ ಬೀಜ :** ಇದರ ಪುಡಿಯು ನೀರನ್ನು ತಿಳಿಮಾಡಿ ತಾನೂ ಕೆಳಕ್ಕೆ ಇಳಿದುಕೊಳ್ಳುವದು ೫.

**ಚಿನ್ನ :** ಇದರಲ್ಲಿ ಕಡಗವೇ ಮುಂತಾದವು ಕಲ್ಪಿತವಾಗಿರುತ್ತವೆ ೯; ಪುಟವಿಟ್ಟಮೇಲೆ ಪೂರ್ಣಪ್ರಕಾಶದಿಂದ ಹೊಳೆಯುವದು ೬೬

ತುಪ್ಪ : ಹಾಲಿನಲ್ಲಿ ಎಲ್ಲೆಲ್ಲಿಯೂ ವ್ಯಾಪಿಸಿಕೊಂಡಿರುತ್ತದೆ ೫೯.

ದಿಗ್ಭ್ರಮೆ : "ಇದು ಪೂರ್ವ" ಎಂಬ ನಿಶ್ಚಿತಜ್ಞಾನವುಂಟಾಗುತ್ತಲೂ ಈ ಭ್ರಮೆಯು ತೊಲಗುವದು ೪೬.

ದೀಪ : ಎಲ್ಲವನ್ನೂ ಬೆಳಗುತ್ತದೆ, ತನ್ನನ್ನು ಯಾರೂ ಬೆಳಗಬೇಕಾದದ್ದಿಲ್ಲ ೨೮. ಒಂದು ದೀಪವು ಬೆಳಗುವದಕ್ಕೆ ಮತ್ತೊಂದರ ಬಯಕೆ ಇರುವದಿಲ್ಲ ೨೯.

ನೀರು : ನೀರಿಗೆ ತಂಪು ಸ್ವಾಭಾವಿಕ ೨೪. ನೀರಿನಲ್ಲಿ ನೀರು ಸೇರಿದರೆ ಸೇರಿಕೊಂಡ ನೀರಿನ ಗುರುತೇನೂ ಕಾಣುವದಿಲ್ಲ ೫೩.

ನೀರುಗುಳ್ಳೆ : ನೀರಿನಲ್ಲಿ ಹುಟ್ಟಿ, ನೀರಿನಲ್ಲಿಯೇ ಇದ್ದು, ನೀರಿನಲ್ಲಿಯೇ ಅಡಗಿಕೊಳ್ಳುವದು ೮; ತೋರಿಕೊಂಡ ಸ್ವಲ್ಪಹೊತ್ತಿನಲ್ಲಿಯೇ ಅಡಗಿಕೊಳ್ಳುವದು ೩೧.

ಪ್ರತಿಬಿಂಬ : ಸ್ವಚ್ಛವಾಗಿರುವ ವಸ್ತುಗಳಲ್ಲಿ ಮಾತ್ರ ತೋರಿಕೊಳ್ಳುತ್ತದೆ ೧೭.

ಬಿಸಿಲುಕುದುರೆ : ಮರುಭೂಮಿಯಲ್ಲಿ ನೀರಿದ್ದಂತೆ ತೋರುವದು. ಇದು ಬರಿಯ ತೋರಿಕೆ ೬೩.

ಬೆಂಕಿ : ಅಡಿಗೆಗೆ ನೇರಾದ ಸಾಧನ; ಇದಕ್ಕೆ ಬಿಸಿಯು ಸ್ವಾಭಾವಿಕ ೨೪; ಬೆಂಕಿಯಲ್ಲಿ ಬೆಂಕಿ ಸೇರಿಕೊಂಡರೆ ಸೇರಿದ ಬೆಂಕಿಯ ಗುರುತು ಸಿಕ್ಕುವದಿಲ್ಲ ೫೩;

ಬೆಳಕು : ದಟ್ಟವಾದ ಕತ್ತಲೆಯನ್ನು ತೊಲಗಿಸುವದು ೩.

ಭ್ರಮರಕೀಟ : ಈ ಹುಳು ಭ್ರಮರದ ಅಂಜಿಕೆಯಿಂದ ಅದನ್ನೇ ಧ್ಯಾನಿಸುತ್ತಿದ್ದು ಅದರ ರೂಪವನ್ನೇ ಹೊಂದುವದೆಂದು ಒಂದು ನಂಬಿಕೆ ೪೯.

ಮಣ್ಣು : ಗಡಿಗೆ, ಮಡಕೆ— ಮುಂತಾದದ್ದಕ್ಕೆ ಉಪಾದಾನಕಾರಣ; ಇದಕ್ಕಿಂತ ಬೇರೆಯಾಗಿ ಗಡಿಗೆಯೇ ಮುಂತಾದವುಗಳಿರುವದಿಲ್ಲ ೪೮.

ಮೋಟುಮರ : ಇದನ್ನು ಕತ್ತಲೆಯಲ್ಲಿ ಮನುಷ್ಯನೆಂದು ತಪ್ಪಾಗಿ ತಿಳಿದುಕೊಳ್ಳುವದುಂಟು, ಮರವೇ ಎಂದು ತಿಳಿದಕೂಡಲೆ ಭ್ರಾಂತಿಯು ಹೋಗುವದು ೪೫,

ರಸಾಯನ : ರೋಗವನ್ನು ಬೇಗನೆ ಪೂರ್ಣವಾಗಿ ನಾಶಗೊಳಿಸುವದು ೩೭

ರಾಜ : ರಾಜನು ಸುಮ್ಮನೆ ಕುಳಿತಿದ್ದರೂ ಅವನ ಬಳಿಯಲ್ಲಿ ಮಿಕ್ಕವರು ಕೆಲಸಮಾಡುತ್ತಿರುವರು ೧೮.

ಸೂರ್ಯ : ಮೋಡವು ಹೋಗುತ್ತಲೂ ಸೂರ್ಯನು ಮೊದಲಿನಂತೆ ಬೆಳಗುತ್ತಲೇ ಇರುವನು ೪! ಸೂರ್ಯನು ಹುಟ್ಟುತ್ತಲೂ ಜನರು ಕೆಲಸದಲ್ಲಿ ತೊಡಗುವರು ೨೦; ಸೂರ್ಯನಲ್ಲಿ ಬೆಳಕು ಸ್ವಾಭಾವಿಕವಾಗಿದೆ ೨೪; ಸೂರ್ಯನು ಎಷ್ಟು ಪ್ರಕಾಶಯುಂತನಾದರೂ ಕುರುಡನಿಗೆ ಕಾಣಿಸುವದಿಲ್ಲ ೬೫.

ಸ್ಫಟಿಕ : ಕಪ್ಪು ಮುಂತಾದ ಆಯಾ ಬಣ್ಣದ ಬಟ್ಟೆಗಳ ಸಂಬಂಧದಿಂದ ಆಯಾ ಬಣ್ಣವಾಗಿರುವಂತೆ ತೋರುವದು ೧೫.

ಹಗ್ಗದ ಹಾವು ಭ್ರಾಂತಿಯಿಂದ ತೋರಿ ಅಂಜಿಕೆಗೆ ಕಾರಣವಾಗಿರುವದು ೨೭.

## ೨. ಪ್ರಮಾಣವಾಕ್ಯಗಳು

ಶ್ಲೋಕ ವಚನ

30. "ಸ ಏಷ ನೇತಿ ನೇತ್ಯಾತ್ಮಾ" —ಬೃ. ೩–೯–೨೬

'ಅಥಾತ ಆದೇಶೋ ನೇತಿ ನೇತಿ" —ಬೃ. ೨–೩–೬

33. 'ಅಪ್ರಾಣೋ ಹ್ಯಮನಾಃ ಶುಭ್ರೋ ಹ್ಯಕ್ಷರಾತ್ಪರತಃ ಪರಃ'

—ಮುಂ. ೨–೧–೨

44. 'ಆತ್ಮಾನಮರಣಿಂ ಕೃತ್ವಾ ಪ್ರಣವಂ ಚೋತ್ತರಾರಣಿಂ |
ಜ್ಞಾನನಿರ್ಮಥನಾಭ್ಯಾಸಾತ್ ಪಾಪಂ ದಹತಿ ಪಂಡಿತಃ'

-ಕೈ. ೧–೧೧

48. 'ಆತ್ಮೈವೇದಂ ಸರ್ವಂ' —ಛಾಂ. ೭–೨೫–೨

53. 'ಅಪಾಮಪ್ಸೋಽಗ್ನಿರಗ್ನೌ ವಾ ವ್ಯೋಮ್ನಿ ವ್ಯೋಮ ನ
ಲಕ್ಷಯೇತ್ | ಏವಮಂತರ್ಗತಂ ಚಿತ್ತಂ ಪುರುಷಃ
ಪ್ರ -ಮೈತ್ರಾಯಣೀ ೪-೧೦

56. "ಸತ್ಯಂ ಜ್ಞಾನಮನಂತಂ ಬ್ರಹ್ಮ" —ತೈ. ೨-೧

98. "ಏತಸ್ಯೈವಾನಂದಸ್ಯಾನ್ಯಾನಿ ಭೂತಾನಿ ಮಾತ್ರಾಮುಪ-
ಜೀವಂತಿ" —ಬೃ. ೪-೩-೩೨

59. 'ಸರ್ವವ್ಯಾಪಿನಮಾತ್ಮಾನಂ ಕ್ಷೀರೇ ಸರ್ಪಿರಿವಾರ್ಪಿತಮ್ |
ಆತ್ಮವಿದ್ಯಾತಪೋಮೂಲಂ ತದ್ಬ್ರಹ್ಮೋಪನಿಷತ್ಪರಮ್'
—ಶ್ವೇ. ೧-೧೬

60. 'ಸ ಹೋವಾಚೈತದ್ವೈ ತದಕ್ಷರಂ ಗಾರ್ಗಿ ಅಭಿವದಂತ್ಯ-
ಸ್ಥೂಲಮನಣ್ವಹ್ರಸ್ವಮದೀರ್ಘಮಲೋಹಿತಮಸ್ನೇಹ-
ಮಚ್ಛಾಯಮತಮೋಽವಾಯ್ವನಾಕಾಶಮಸಂಗಮರಸಮ-
ಗಂಧಮಚಕ್ಷುಷ್ಕಮಶ್ರೋತ್ರಮವಾಗಮನೋಽತೇಜಸ್ಕಮ-
ಪ್ರಾಣಮಮುಖಮಮಾತ್ರಮನನ್ತರಮಬಾಹ್ಯಂ ನ ತದಶ್ನಾತಿ
ಕಿಂಚನ ನ ತದಶ್ನಾತಿ ಕಶ್ಚನ' —ಬೃ. ೩-೮-೮

61. 'ನ ತತ್ರ ಸೂರ್ಯೋ ಭಾತಿ ನ ಚಂದ್ರತಾರಕಂ........'
—ಮು. ೨-೧೦, ಕ. ೨-೨-೧೫, ನಾ. ೨೫

64. 'ಯಚ್ಚ ಕಿಂಚಿಜ್ಜಗತ್ಸರ್ವಂ........ಸ್ಥಿತಃ' —ಗೀ. ೧೫-೧೦

# ಶ್ಲೋಕಾನುಕ್ರಮಣಿಕೆ


| | | | |
|---|---|---|---|
| ಅಖಣ್ಡಾನನ್ದರೂಪಸ್ಯ | ೫೮ | ತದವ್ಯಕ್ತಮಖಿಲಂ ವಸ್ತು | ೫೯ |
| ಅಜ್ಞಾನಕಲುಷಂ ಜೀವಮ್ | | ತಪೋಭಿಃ ಕ್ಷೀಣಪಾಪಾನಾಂ | ೧ |
| ಅಜ್ಞಾನಾನ್ಮಾನಸೋಪಾಧೇಃ | ೨೨ | ತಾವತ್ಸತ್ಯಂ ಜಗದ್ಭಾತಿ | ೭ |
| ಅತದ್ವ್ಯಾವೃತ್ತಿರೂಪೇಣ | ೫೭ | ತಿರ್ಯಗೂರ್ಧ್ವಮಧಃ ಪೂರ್ಣಂ | ೫೬ |
| ಅನಣ್ವಸ್ಥೂಲಮಹ್ರಸ್ವಮ್ | ೬೦ | ತೀರ್ತ್ವಾ ಮೋಹಾರ್ಣವಂ ಹತ್ವಾ | ೫೦ |
| ಅನಾದ್ಯವಿದ್ಯಾನಿರ್ವಾಚ್ಯಾ | ೧೪ | ದಿಗ್ದೇಶಕಾಲಾದ್ಯನಪೇಕ್ಷ್ಯ | ೬೮ |
| ಅಮನಸ್ತ್ವಾನ್ನ ಮೇ ದುಃಖ- | ೩೩ | ದೃಶ್ಯತೇ ಶ್ರೂಯತೇ ಯದ್ಯತ್ | ೬೪ |
| ಅರುಣೇನೇವ ಬೋಧೇನ | ೪೩ | ದೇಹಾನ್ಯತ್ವಾನ್ನ ಮೇ ಜನ್ಮ | ೩೨ |
| ಅವಚ್ಛಿನ್ನ ಇವಾಜ್ಞಾನಾತ್ | | ದೇಹೇನ್ದ್ರಿಯಗುಣಾನ್ ಕರ್ಮಾ- | ೨೧ |
| ಅವಿರೋಧಿತಯಾ ಕರ್ಮ | | ದೇಹೇನ್ದ್ರಿಯಮನೋಬುದ್ಧಿ | ೧೮ |
| ಅಹಮಾಕಾಶವತ್ಸರ್ವಮ್ | ೩೫ | ನಾನೋಪಾಧಿವಶಾದೇವ | ೧೧ |
| ಆತ್ಮಚೈತನ್ಯಮಾಶ್ರಿತ್ಯ | ೨೦ | ನಿತ್ಯಶುದ್ಧವಿಮುಕ್ತೈಕಮ್ | ೩೬ |
| ಆತ್ಮನೋ ವಿಕ್ರಿಯಾ ನಾಸ್ತಿ | ೨೬ | ನಿರ್ಗುಣೋ ನಿಷ್ಕ್ರಿಯೋ ನಿತ್ಯೋ | ೩೪ |
| ಆತ್ಮನಃ ಸಚ್ಚಿದಂಶಶ್ಚ | ೨೫ | ನಿಷಿಧ್ಯ ನಿಖಿಲೋಪಾಧೀನ್ | ೩೦ |
| ಆತ್ಮನ್ಯೇವಾಖಿಲಂ ದೃಶ್ಯಮ್ | ೩೯ | ಪಞ್ಚಕೋಶಾದಿಯೋಗೇನ | ೧೫ |
| ಆತ್ಮಾ ತು ಸತತಂ ಪ್ರಾಪ್ತೋ | ೪೪ | ಪಞ್ಚ ಪ್ರಾಣಮನೋಬುದ್ಧಿ- | ೧೩ |
| ಆತ್ಮಾಽವಭಾಸಯತ್ಯೇಕೋ | ೨೮ | ಪಞ್ಚೀಕೃತಮಹಾಭೂತ | ೧೨ |
| ಆತ್ಮೈವೇದಂ ಜಗತ್ಸರ್ವಮ್ | ೪೮ | ಪ್ರಕಾಶೋಽರ್ಕಸ್ಯ ತೋಯಸ್ಯ | ೨೪ |
| ಆವಿದ್ಯಕಂ ಶರೀರಾದಿ | ೩೧ | ಬಾಹ್ಯಾನಿತ್ಯಸುಖಾಸಕ್ತಿಮ್ | ೫೧ |
| ಉಪಾದಾನೇಽಖಿಲಾಧಾರೇ | | ಬೋಧೋಽನ್ಯಸಾಧನೇಭ್ಯೋ ಹಿ | ೨ |
| ಉಪಾಧಿಸ್ಥೋಽಪಿ ತದ್ಧರ್ಮೈಃ | ೫೨ | ಯಥಾಕಾಶೋ ಹೃಷೀಕೇಶೋ | ೧೦ |
| ಉಪಾಧಿವಿಲಯಾದ್ವಿಷ್ಣೌ | ೫೩ | ಯದ್ದೃಷ್ಟ್ವಾ ನಾಪರಂ ದೃಶ್ಯಮ್ | ೫೫ |
| ಏವಂ ನಿರನ್ತರಕೃತಾ | ೩೭ | ಯದ್ಭಾಸಾ ಭಾಸ್ಯತೇಽರ್ಕಾದಿ | ೬೧ |
| ಏವಮಾತ್ಮಾರಣೌ ಧ್ಯಾನ- | ೪೨ | ಯಲ್ಲಾಭಾನ್ನಾಪರೋ ಲಾಭೋ | ೫೪ |
| ಜಗದ್ವಿಲಕ್ಷಣಂ ಬ್ರಹ್ಮ | ೬೩ | ರಜ್ಜುಸರ್ಪವದಾತ್ಮಾನಂ | ೨೭ |
| ಜೀವನ್ಮುಕ್ತಸ್ತು ತದ್ವಿದ್ವಾನ್ | ೪೯ | ರಾಗೇಚ್ಛಾ ಸುಖದುಃಖಾದಿ | ೨೩ |
| ಜ್ಞಾತೃಜ್ಞಾನಜ್ಞೇಯಭೇದಃ | ೪೧ | ರೂಪವರ್ಣಾದಿಕಂ ಸರ್ವಂ | ೪೦ |
| ತತ್ತ್ವಸ್ವರೂಪಾನುಭವಾತ್ | ೪೬ | ವಪುಸ್ತುಷಾದಿಭಿಃ ಕೋಶೈ- | ೧೬ |

| | | | |
|---|---|---|---|
| ವಿವಿಕ್ತದೇಶ ಆಸೀನೋ | ೭೮ | ಸಮ್ಯಗ್ವಿಜ್ಞಾನವಾನ್ ಯೋಗೀ | ೪೭ |
| ವ್ಯಾಪೃತೇಷ್ವಿನ್ದ್ರಿಯೇಷ್ವಾತ್ಮಾ | ೧೯ | ಸರ್ವಗಂ ಸಚ್ಚಿದಾನನ್ದಮ್ | ೬೫ |
| ಶ್ರವಣಾದಿಭಿರುದ್ದೀಪ್ತ- | ೬೬ | ಸ್ಥಾಣೌ ಪುರುಷವದ್ಭ್ರಾನ್ತ್ಯಾ | ೪೫ |
| ಸಂಸಾರಃ ಸ್ವಪ್ನತುಲ್ಯೋ ಹಿ | ೬ | ಸ್ವಬೋಧೇ ನಾನ್ಯಬೋಧೇಚ್ಛಾ | ೨೯ |
| ಸಚ್ಚಿದಾತ್ಮನ್ಯನುಸ್ಯೂತೇ | ೯ | ಸ್ವಯಮನ್ತರ್ಬಹಿರ್ವ್ಯಾಪ್ಯ | ೬೨ |
| ಸದಾ ಸರ್ವಗತೋಽಪ್ಯಾತ್ಮಾ | ೧೭ | ಹೃದಾಕಾಶೋದಿತೋ ಹ್ಯಾತ್ಮಾ | ೬೭ |


ಅಧ್ಯಾತ್ಮಪ್ರಕಾಶ ಮುದ್ರಣಾಲಯ, ಹೊಳೆನರಸೀಪುರ.